



ಸಂಪುಟ ೫ | ಜುಲೈ ೧೯೪೬ | ಸಂಚಿಕೆ ೪

## ಕುಹಕಿಡಿಗಳು

‘ ಹುಲಿ ಬಂತು ಹುಲಿ ಬಂತು ’ ಎಂದು ರೈಲ್ವೆ ಫೆಡರೇಷನ್ನಿನವರು ಮೊದಲ ಬಾರಿ ಕೂಗಿದ್ದಾಯಿತಂತೆ.

* * *

ಕಾಳಿನ ನಿಯೋಗದವರು ಬರಿ ಕೈಯಲ್ಲಿ ಹಿಂತಿರುಗಿದರೂ ಕಾಗದದ ನಿಯೋಗದವರು ಸ್ವಲ್ಪಮಟ್ಟಿಗಾದರೂ ಕೃತಕಾರ್ಯರಾದರಂತೆ.

—ಕ್ಷಾಮದ ವಿಷಯ ಇನ್ನೂ ಬೇಕಾದಷ್ಟು ಬರೆಯಬಹುದಲ್ಲ !

* * *

ಇಂಗ್ಲೆಂಡಿನ ಜನರಿಗೆಲ್ಲಾ ಈಗ ಹಲವು ಭಾರತೀಯರು ಬಹಳ ಚೆನ್ನಾಗಿ ಪರಿಚಿತರಾಗಿದ್ದಾರಂತೆ—

—ಅವರು ಕಂಡ ಭಾರತೀಯ ಗಣ್ಯ ವ್ಯಕ್ತಿಗಳೆಂದರೆ-ವಿಜಯ್ ಮರ್ಚಂಟ್, ಸರವಾಟೇ - ಮನ್‌ಕಡ್, ಮೋದಿ ಇತ್ಯಾದಿ.

* * *

ರಾತ್ರಿ ಹಾಲು ತುಂಬಿಟ್ಟ ಪಾತ್ರೆಯಲ್ಲಿ, ಬೆಳಗ್ಗೆ ಒಂದು ನೀರುಬಳ್ಳಿಯೂ ಬೆಳೆದುಕೊಂಡಿತ್ತಂತೆ.

—ಟೀಕೆಯೂ ಅನವಶ್ಯಕವಲ್ಲವೇ ?

ರಾಮಟಂಕಿ ವರಹದ ಒಂದು ಥೈಲಿ ಥೈಲಿಯೇ ಒಬ್ಬನಿಗೆ ಸಿಕ್ಕಿತಂತೆ—ನೆಲ ಅಗಿಯುತ್ತಿದ್ದಾಗ. ಸರ್ಕಾರ ಅದನ್ನು ವಶಪಡಿಸಿಕೊಂಡಿತಂತೆ.

—ಅದಕ್ಕೇ ನಾಣ್ಣುಡಿ: ಹೂತಿಟ್ಟ ಹಣ ಸರಕಾರಕ್ಕೆ, ಬಾಚಿಟ್ಟ ಹಣ ಬಂಡವಾಳಕಾರನಿಗೆ—

* * *

ಕಾಶ್ಮೀರದಲ್ಲಿ ಪ್ರಜಾಬಾಹುಳ್ಯ ಉಳ್ಳವರ ಅಧಿಕಾರ ಏರ್ಪಾಡಾಗಬೇಕೆಂದು, ಕಾಂಗ್ರೆಸ್ಸಿನ ಭಾವೀ ಅಧ್ಯಕ್ಷ ನೆಹ್ರೂರವರ ಆಕಾಂಕ್ಷೆಯಂತೆ—

—ಇದೊಂದು ವಿಚಾರದಲ್ಲಿಯಾದರೂ, ಮುಸ್ಲಿಂ ಲೀಗಿನ ಪೂರ್ಣ ಬೆಂಬಲವಿದೆಯಂತೆ.

* * *

ಸಂಸ್ಥಾನಗಳ ಪ್ರಜೆಗಳ ಅಶೋತ್ತರಗಳನ್ನು ಈಡೇರಿಸಲು ಕಂಕಣಬದ್ಧರಾದವರಿಗೆ, ಹೈದರಾಬಾದ್ ಎಂಬ ಸಂಸ್ಥಾನ ಇರುವುದೂ ಗೊತ್ತಿಲ್ಲವೆಂದು ಸುದ್ದಿ.

* * *

ಪಾಕೀಸ್ಥಾನ್ ಹಿಂದೂಸ್ಥಾನ್ ಗಲಾಟೆಯ ನಿವಾರಣೆಗೆ ಒಂದೇ ಒಂದು ಉಪಾಯವಂತೆ—

—ಇದ್ದ ಸ್ಥಾನಗಳನ್ನೆಲ್ಲಾ ಇರುವ ರಾಜರಿಗೆ ಹಂಚಿಬಿಟ್ಟರೆ—ಸಮಸ್ಯೆ ನಿವಾರಣೆಯಾದಂತೆಯೇ,—

* * *

ಇಟಲಿಯ ಮಾಜಿ ಅರಸ ಉಂಬರ್ಟೋ ಎಲ್ಲಿ ನೆಲೆಸುತ್ತಾನೋ ಎಂದು ಸಣ್ಣಪುಟ್ಟ ರಾಜರನೇಕರು ಯೋಚಿಸುತ್ತಿರುವರಂತೆ—

—ಅಲ್ಲೇ ಇವರೂ ನೆಲೆಸಬೇಕೆಂದೋ ?

* * *

ಜವಾಬ್ದಾರಿ ಸರಕಾರದ ಸ್ಥಾಪನೆಮಾಡುವ ಸಡಗರದಲ್ಲಿ, ಸಭೆಯಲ್ಲಿನ ಭಾಷಣಗಳು ಬೇಜವಾಬ್ದಾರಿಯ ತನಕ ಹೋಯಿತಂತೆ

* * *

ಕಿವಿಯಲ್ಲಿ ಘುಯ್ ಎಂದು ಶಬ್ದ ಆಗುತ್ತೆ—ತಲೆಯೆಲ್ಲಾ ಚಿಟಗುಟ್ಟುತ್ತೆ—ಏನುಮಾಡಬೇಕು ಎಂದು ಒಬ್ಬರು ಪತ್ರ ಬರೆದಿದ್ದಾರೆ—

—ಯಾಕಂತೆ ಈ ಸಿನಿಮಾ ಸಂಗೀತ ಕೇಳಬೇಕು ?

* * *

——o——

# ಉರಿಗಾಳು

—o—

ಚಕ್ರವರ್ತಿಯ ವರ್ಧಂತಿ ಬಿರುದಾವಳಿಯನ್ನು ಓದಿ ಓದಿ ಅನೇಕರ ಕಣ್ಣು ಕೆಂಪಗಾಗಿದೆಯಂತೆ.

* * *

ದೇಶೀಯ ಕ್ರೈಸ್ತರಿಗೆ ಯಾವ ತರಹದ ವಿಶೇಷ ಹಕ್ಕುಗಳನ್ನೂ ಕಾನೂನು ಮೂಲಕ ಕಾದಿಡಬೇಕಾಗಿಲ್ಲವೆಂದು ಅವರು ಅಭಿಪ್ರಾಯಪಟ್ಟಿದಾರೆ ...... ನಮ್ಮಲ್ಲೂ ಅವರಿಗೆ ಇದೇ ಅಭಿಪ್ರಾಯವೆ.

* * *

ಪ್ರಜೆಗಳೂ ಅಧಿಕಾರಿಗಳೂ ಗಂಡ ಹೆಂಡಂದಿರಂತಿರಬೇಕು (ಭಾಷಣ)........ ಅಧಿಕಾರಿಗಳು ಹೆಂಡಂದಿರಂತೆಯೇ ಇದಾರಲ್ಲಾ, ಈಗ ?

* * *

ಕೂಲಿಯವರು ದಿನವೊಂದಕ್ಕೆ 1 ರೂ. ಸಂಪಾದಿಸುತ್ತಿರುವುದಕ್ಕೂ, ಉಪಾಧ್ಯಾಯರ ಸಂಬಳಕ್ಕೂ ಸಂಬಂಧವಿಲ್ಲ (ಉತ್ತರ)........ ಕೂಲಿ ಮಠಗಳಾಗಿದ್ದರೆ, ಆ ಮಾತು ಬೇರೆ.

* * *

ಜರ್ಮನ್ ನೌಕಾಬಲವನ್ನು ಹಂಚಿದಾಗ, ಇಂಡ್ಯಾ ದೇಶದ ಪಾಲಿಗೆ ಬಂದ 23 ವರ್ಷದ ಹಳೇ ನೌಕೆಯನ್ನು ಇಂಡ್ಯಾ ಸರ್ಕಾರ ಬೇಡವೆಂದಿದೆ........ಹಂಚಿದವರಿಗೆ ಹಲ್ಲು ಬಾಯಿ, ಗೆದ್ದುಕೊಟ್ಟವರಿಗೆ ಗೆದ್ದಲು ಹಿಡಿದದ್ದು.

* * *

ರಾಜ್ಯಾಂಗ ರಚನಾ ಸಭೆಗೆ ಮೊತ್ತ ಮೊದಲನೆಯದಾಗಿ ಕೊಡಗು ಪ್ರಾಂತದಿಂದ ಒಬ್ಬರನ್ನು ಚುನಾಯಿಸಿ ಆಗಿದೆ. (ಸುದ್ದಿ) ...... ಆರಂಭಶೂರಾಃ ಖಲು ದಾಕ್ಷಿಣಾತ್ಯಾಃ

* * *

ಬ್ರಾಹ್ಮಣ ಮಹಾಸಭೆಯ ಮುಂದಿನ ಅಧಿವೇಶನವನ್ನು ಕೋಲಾರ ಡಿಸ್ಟ್ರಿಕ್ಟ್ 'ಕಾಗತಿ' ಎಂಬ ಗ್ರಾಮದಲ್ಲಿ ನಡೆಸುವುದು ಸೂಕ್ತ ಎಂದು ಹಲವರು ಅಭಿಪ್ರಾಯಪಡುತ್ತಿದಾರಂತೆ.

* * *

ಲಂಕಾದ್ವೀಪದಲ್ಲಿ ಭಾರತೀಯರಿಗಾಗುತ್ತಿರುವ ಹಿಂಸೆ...........ರಾಮಾಯಣ ದಲ್ಲಿ ಇದಕ್ಕೆ ಏನಾದರೂ ಪರಿಹಾರ ಹೇಳದೆಯೆ ?

* * *

ಭಾಗ್ಯವಂತರನ್ನೂ ಬಡವರನ್ನೂ ಆಸ್ಪತ್ರೆಗಳಲ್ಲಿ ಏಕರೀತಿಯಾಗಿ ಭಾವಿಸ ಲಾಗಿದೆ (ಸುದ್ದಿ)........ಆದ್ದರಿಂದಲೇ, ಬಡವರು ಗೋಳಾಡುತ್ತಿರುವುದು

* * *

"ಹಸಿದ ಗೂಳಿ ಮಹಡಿ ಮೆಟ್ಟಲು ಹತ್ತಿತು" (ಶಿರೋನಾಮೆ)........ಸಾಹೇ ಬರ ಬಂಗಲೆಗಳಲ್ಲಿ ಇದು ದಿನವೂ ನಡೆಯುತ್ತದೆ ಎಂದು ಜವಾನರು ಹೇಳುತ್ತಾರೆ.

* * *

"ಪ್ರೈಮರಿ ಉಪಾಧ್ಯಾಯರ ಸಂಬಳ 15-1-20 ಇದ್ದುದನ್ನು ಗ್ರೇಡಿಲ್ಲದೆ 20ಕ್ಕೆ ಹೆಚ್ಚಿಸಲಾಗಿದೆ" "ಪೋಲೀಸ್ ದಫೇದಾರರ ಸಂಬಳವನ್ನು 25ಕೆ ಹೆಚ್ಚಿಸಲಾಗಿದೆ".... ...ಶಿಕ್ಷಕರಿಗಿಂತ, ರಕ್ಷಕರೇ ಮೇಲು ಎಂಬುದಕ್ಕೆ ಇದೂ ಒಂದು ನಿದರ್ಶನ.

* * *

"ಕ್ಷಾಮ ನಿವಾರಣಾರ್ಥವಾಗಿ ಎಲ್ಲ ಕಡೆಯೂ ಭಾವಿಗಳನ್ನು ತೋಡಬೇಕು" (ಸಲಹೆ)........ಉತ್ಕಟಾವಸ್ಥೆ ಬಂದಾಗ, ಇದರಿಂದ ಅನುಕೂಲವುಂಟು.

* * *

6 ಜನರು ಕೂಡುವ ಕಂಪಾರ್ಟ್‌ಮೆಂಟಿನಲ್ಲಿ 27; 28 ಜನರು ಪ್ರಯಾಣ ಮಾಡುತ್ತಿದಾರೆ (ಸುದ್ದಿ........) ಬರಗಾಲ ಪರಿಸ್ಥಿತಿ.

* * *

"ಒಂದು ಗುಬ್ಬಚ್ಚಿ ಬಂದರೆ, ಬಿಸಿಲು ಕಾಲ ಬಂತು, ಎಂದಲ್ಲ" (ಭಾಷಣ) ... ....ಅಲ್ಲ. ಇನ್ನೊಂದು ಗುಬ್ಬಚ್ಚಿ ಬರುತ್ತದೆ, ಅಂತ, ಅಷ್ಟೆ.

* * *

"Free ಬುದ್ಧಿಃ ಪ್ರಳಯಾಂತಕಾ" (ಸುಭಾಷಿತ)

* * *

——o——



ಅಯ್ಯೋ ! ಬಾಳೇಹಣ್ಣೇ—ಥೂ. ಅದು ಕಾಯಿ. ತಿಂದ್ರೆ ಕಹಿಯಾಗಿರುತ್ತೆ. ಹೊಟ್ಟೆನೋವು ಬರುತ್ತೆ. ಅಪ್ಪ ತರೋದೇ ಚೆನ್ನಾಗಿರೋದು——ಅಂತ ಅಮ್ಮ ಹೇಳಿದ್ಲು ಅವತ್ತು………ನಂಗ್ಬೇಡ………

# ......... ರಾಯನ ಇನ್ಸ್ಪೆಕ್ಷನ್ .........

ಇನ್ಸ್ಪೆಕ್ಟರ್ ಅಯ್ಯೋಜಿರಾಯನಿಗೆ, ಒಂದು ತಿಂಗಳಿಂದಲೂ ಕೇಸುಗಳ ವಾಸನೆಯೂ ಸಹ ಬಂದಿರಲಿಲ್ಲ. ಅವನ ಕಿವಿಗೆ ಬಿದ್ದ ಕೇಸುಗಳೆಲ್ಲವೂ ಅವನ ಕೆಳಗಿನವರ ಕೈಲೇ ಕೈಲಾಸ ಕಾಣುತ್ತಿದ್ದವು. ಒಂದೆರಡು ಅವನಿಗೆ ಬಂದರೂ ಬರಿ ತರಲೆಯವೇ ಹೊರತು ಕಾಫಿಯ ಖರ್ಚೂ ದೊರೆಯುತ್ತಿರಲಿಲ್ಲ. ಇದರಿಂದ ಅಯ್ಯೋಜಿರಾಯನ ಮನಸ್ಸು ಮುನಿಸಿಪಲ್ ತೋಯದಂತೆ ತಿಳಿಯಾಗಿತ್ತು. ಅದರಿಂದಲೇ ಇರಬೇಕು, ಅಂದು ರಾತ್ರೆ ಅಯ್ಯೋಜಿರಾಯನು "ಇಂದು ಏನೇ ಆಗಲಿ, ನಾನು ಒಂದು ಕೇಸನ್ನಾಗಲೀ ಹಿಡಿದೇ ತೀರುತ್ತೇನೆ. ಇಲ್ಲದಿದ್ದರೆ ನಾನು ಅಯ್ಯೋಜಿರಾಯನೇ ಅಲ್ಲ, ಖಂಡಿತ ಅಲ್ಲ" ಎಂದು ನಿರ್ಧಾರಮಾಡಿ ಕುಡಿಮೀಸೆಯ ಚೂಪು ತುದಿಯನ್ನೇ ಚೀಪುತ್ತಾ ಅದರ ರುಚಿಯನ್ನು ಸವಿಯುತ್ತಾ ಮುಂಬರುವ ಕನಸಿನ ಸುಖವನ್ನು ಮೆಲ್ಲುತ್ತಾ ಹೊರಬಿದ್ದಿದ್ದನು.

ರಾತ್ರೆ ೯ ರಿಂದ ೧೨॥ ಯವರೆಗೆ ಒಂದೇ ಸಮನೆ ಆ ಊರಿನ ಸಮಸ್ತ ಬೀದಿಗಳನ್ನು ಬೀಟಾಯಿಸುತ್ತಿದ್ದರೂ ಒಂದು ಪ್ರಾಣಿಯಾದರೂ— ಒಂದು ಲೈಟಿಲ್ಲದ ಮೋಟಾರ್, ದೀಪವಿಲ್ಲದ ದ್ವಿಚಕ್ರವಾಹನ, ಕಡೆಗೆ ಪುಟ್‌ಪಾತನ್ನು ಬಿಟ್ಟ ದಾರಿಹೋಕ— ಸುಳಿಯಬೇಡವೇ ಇವನ ಕಣ್ಣಮುಂದೆ? "ಆದದ್ದಾಗಲಿ, ನಾನು ಅಯ್ಯೋಜಿರಾಯನೇ? ಅಲ್ಲವೇ? ಎಂಬುದನ್ನು ನೋಡಿಯೇ ಬಿಡುತ್ತೇನೆ" ಎಂದು ಹಾಗೆಯೇ ಕತ್ತಲೆಯ ಕಾಳಮ್ಮನ ಬೀದಿಗೆ ಕಾಲಿಟ್ಟನು. ಪಕ್ಕದ ಮುನಿಸಿಪಲ್ ಮೋರಿಯನ್ನು ಪರೀಕ್ಷಿಸಿ ತೃಪ್ತಿಪಟ್ಟ ಮಂದಮಾರುತನು ಅವನ ಮುಖವನ್ನು ಮೂಸಿ ನೋಡಿ ಅವನಂ ಹಾಗೆಯೇ ನಿಲ್ಲಿಸಿತು. ಅವನ ಮೀಸೆಯ ಅಗ್ರವೇ ಅವನ ನಾಲಿಗೆಯನ್ನು ಅಪ್ಪಿತೆಂದು ತಿಳಿಯಲು ಅವನಿಗೆ ನಿಜವಾಗಿಯೂ ಸ್ವಲ್ಪಕಾಲಬೇಕಾಯಿತು. "ಎಲೆಲಾ, ನಾನು ಕೇಸೊಂದನ್ನೂ ಹಿಡಿದಿಲ್ಲವೆಂದು ನನ್ನ ಮುದ್ದು ಮೀಸೆಗೂ ನನ್ನಮೇಲೆ ಕೋಪವೇ!?" ಎಂದು ರಾಯನು ವಾಕ್-ಈಸಿ (walk-easy) ಯಾಗಿ ಚಿಂತಿಸುವಷ್ಟರಲ್ಲೇ ರಾಯನ ಕಿವಿ ಹೊಕ್ಕ ಶಬ್ದಸಮೂಹವು ಅವನನ್ನು ಟಿನ್‌ಷನ್ ಸ್ಥಾನಕ್ಕೆ ತಂದಿತು.

"ಏನೋ ಸ್ವಾಮಿ, ನಾನೂ ಕಷ್ಟಪಟ್ಟಿದ್ದೀನಿ ಕೂಡಿಹಾಕೊಕೆ, ನಾಕು ತಿಂಗಳಿಂದಾನೂ........ಹೋಗ್ಲಿ ನಿಮಗೇಂತಾನೇ ಇಟ್ಟಿದ್ರೆ ಇಷ್ಟುದಿವಸಾನೂ .......ಇಷ್ಟು ಚೌಕಾಶಿಮಾಡೋದೆ?!........ ಹೋಗ್ಲಿ ಕಡೇಮಾತೂಂತಾ, ೩೫ ರೂಪಾಯಿಗೆ ಕೊಡ್ತೇನೆ, ನಿಮಗೋಸ್ಕರ......." "ಅದೆಲ್ಲಾ ಬೇಡಿ, ಸುಮ್ಮನೆ ನಂನಮ್ಮಲ್ಲೇ ಯಾಕೆ ಚೌಕಾಶೀ? ನನ್ನಲ್ಲಿರೋದೇ ೨೯ ರೂ. ೧೫ ಆಣೆ ......................

ಅದ್ರಿಂದ ತರಲಿ ತೆಗೀದೆ ೩೦ ರೂಪಾಯ್ಗಿ ,ತಗಲ್ಹಾಕ್ಬಿಡಿ ನಂಗೇನೇ........ ಇರೋ ದುಡ್ಡಷ್ಟನ್ನೂ ಈಗಲೇ ಇಲ್ಲೇ, ಕೊಡುತ್ತೇನೆ. ಬಾಕಿ ಊರ್‍ಗೋಗಿ—ಹ್ಯಾಗೂ M. O ತೊಗೋಳೋ ಹಾಗೆ ಕಾಣೆ ಪೋಸ್ಟ್‌ನೋರು, ಆದ್ದರಿಂದ V P.P.—ಕಳಿಸ್ತೇನೆ, ಖಂಡಿತವಾಗ್ಯೂ ''

ಜೂಜಿನ ಕಟ್ಟಿಗೆ ಕನಿಷ್ಟಪಕ್ಷ ಆರು ಕನಿಷ್ಟಬಿಲ್ಲೆಗಳ ಜೊತೆ ನುಗ್ಗಿದ್ದರೂ, ರಾಯನಿಗೆ ಅಷ್ಟು ಸಂತೋಷವಾಗುತ್ತಿರಲಿಲ್ಲ. " ಹೇಗೂ ನಾನು ಅಯ್ಯೋಜಿ ರಾಯನೇ ಅಲ್ಲವೇ ? '' ಎಂದು ಮೀಸೆಯ ಎರಡು ತುದಿಗಳನ್ನೂ, ಒಂದಾಗುತ್ತಲೊಂದರಂತೆ, ಜಿಹ್ವಾಗ್ರದಿಂದಪ್ಪುತ್ತಾ ಆ ಶಬ್ದಸಮೂಹದ ಆವಾಸಸ್ಥಾನದ ಕಡೆಗೆ ಹೊರಟ ಅಯ್ಯೋಜಿ.

ಮಾತನಾಡುತ್ತಿದ್ದ ವ್ಯಕ್ತಿದ್ವಯರಲ್ಲಿ, ಒಬ್ಬನು, ಅವಲಕ್ಕಿ ಅಂಗಡಿಯ ಅಬ್ಜಾರ್ ಎಂದು ಅನಾಯಾಸವಾಗಿ ಪತ್ತೆಹಚ್ಚಿದ ಅಯ್ಯೋಜಿ. ಇನ್ನೊಬ್ಬನು ಯಾರೋ ಸದ್ ಗೃಹಸ್ಥನಂತಿದ್ದ. ಹೇಗಾದರೂ ಕನಿಷ್ಟಕ್ಕೆ ಐದೇ ಆದರೂ—ರುಪಾಯಿಗೆಳು ದೊರೆತೇ ದೊರೆಯುವುದೆಂಬ ಖಾತರಿಯಮೇಲೆ, ಅಜ್ಜಾರ್‌ನ ಅಷ್ಟಾವಕ್ರ ಷರಟಿನ ಕಾಲರನ್ನು ಎಡಗೈಯಿಂದಲೇ ಹಿಡಿದ ಅಯ್ಯೋಜಿ. " ಏನ್ರಯ್ಯಾ ಇದು, ಬ್ಲ್ಯಾಕ್‌ಮಾರ್ಕೆಟ್, ನಡೀರಿ ಸ್ಟೇಷನ್‌ಗೆ ಇಬ್ಬರೂ 50 - 50 ರೂ. ಹಾಕಿಸ್ತೀನಿ ಜುಲ್ಮಾನೇನಾ ಇಬ್ರಿಗೂ '' ಅಂತ ಜಬರ್ದಸ್ತು ಮಾಡಿದ. " ಏನಿಲ್ಲ ಸ್ವಾಮಿ, ಬರಿ ಬರಭತ್ತ, ೨ ಪಲ್ಲ ಇತ್ತು....ಯಾವುದಕ್ಕೂ ಬರೋಲ್ಲಂತ.... ಇವರಿಗೇ....20 ರೂಪಾಯಿನಂತೆ ''— ಎಂದು ಆ ಗೃಹಸ್ಥ ಬಾಯಿಬಿಚ್ಚುವಷ್ಟರಲ್ಲೇ ಅಯ್ಯೋಜಿ ಪುನಃ ರೇಗಿದ. ಬಲಿಗೆ ಆಸಾಮಿಗಳು ಖಂಡಿತ ಬೀಳುವರೆಂದು ಕಸಬಿನನುಭವದಿಂದ ಖಾತ್ರಿಯಾಗಿತ್ತು ಅವನಿಗೆ, ಅಂದರೆ ಅಯ್ಯೋಜಿಗೆ. " ಅದೆಲ್ಲಾ ನಾಳೆ ಆಗ್ಲಿ ನಿಮ್ಮ ಪುರಾಣ ಊದೋದು. ಒಂದು ಕಾಳು ಅಕ್ಕಿ ಸಿಕ್ಕೋಲ್ಲ ತಿನ್ನೋಕ್ಕೆ, ಇವರು ಭತ್ತಮಾರ್‍ತಾರಂತೆ, ೨ ಪಲ್ಲ ಭತ್ತಾನ ......ಎಲ್ಲಿತ್ರೀ ಭತ್ತ ನಿಮಗೇ, ಹ್ಞೂಂ ....... ಹೇಳ್ರಿ ಬೇಗ....ಇಲ್ಲದಿದ್ರೆ ಇನ್ನೂ ಹೆಚ್ಚಿಸ್ತೀನಿ ಜುಲ್ಮಾನೇನ '' ಎಂದು ಗುಡುಗಿದ ಅಯ್ಯೋಜಿರಾಯ. " ಅದೇ ಸ್ವಾಮಿ, ಡಿಪೋಲೇ ಕೊಂಡ್ಕೊಂಡೇ ಅಷ್ಟನ್ನು ನಿಜವಾಗೂ—" ಎಂದು ತನ್ನ ಹಲ್ಲುಗಳನ್ನು ಮಿಂಚಿಸಿದ ಆ ಗೃಹಸ್ಥ ಆ ಕಾರ್ಗತ್ತಲೆಯಲ್ಲಿ.

" ಏನೂ ?!.... ...ಡಿಪೋಲೆ ?........ಭತ್ತಾನ !.... . ! " ಎಂದು ಅಯ್ಯೋಜಿ ಅರಚುವಷ್ಟರಲ್ಲೇ ಆತ ಬಾಯಿಹಾಕಿದ " ಅದೇ ಸ್ವಾಮಿ, ಸರ್ಕಾರದೋರು ಕೊಡ್ತಾ ಇಲ್ವೇ ಅಕ್ಕೀನ ಅದರಲ್ಲಿದ್ದ ಭತ್ತಾನೆಲ್ಲಾ ೪ ತಿಂಗಳಿಂದಾನೂ ಕೂಡಿಹಾಕ್ತಾ ಇದ್ದೆ, ಆರಿಸಿ. ನಿನ್ನೇಗೆ ಸರಿಯಾಗಿ ಇನ್ನೂರು ಸೇರು ಆಯ್ತು, ಕಲ್ಲನ್ನೂ ಕೂಡಿಟ್ಟಿದ್ದೀನಿ, ಅದು ನಾಲ್ಕುಗಾಡಿ ಆಗಿರಬಹುದು. ಅದನ್ನೂ ಯಾರಾದ್ರೂ ರಸ್ತೇ ಕಂಟ್ರಾ

ಕ್ಟರಿಗೇ........" ಎಂದು ಮುಗಿಸುವಷ್ಟರಲ್ಲೇ ಅವರಿಬ್ಬರೂ ಅಯ್ಯೋಜಿರಾಯನ ದೇಹವು ಭೂ ಶಯನವಾದುದನ್ನು ಕಂಡು ಬಹಳ ಸಂ...........ಪಟ್ಟರು.

ಅಯ್ಯೋಜಿರಾಯನಿಗೆ ಎಚ್ಚರವಾದಾಗ, ಅವನ ಬಾಯಿಗೆ ಕಾಫಿ ಹುಯ್ಯುತ್ತಿದ್ದ ಕನಿಷ್ಟಬಿಲ್ಲ ಕಷ್ಟಪ್ಪಣ್ಣನನ್ನು ಕಂಡ. ಅವನ ಚರಿತ್ರೆಯನ್ನು ಕೇಳಿ ಅವನೆಂದ "ಬಿಡಿ ಬುದ್ಧಿ, ಅವರು ತಪ್ಪಿಸ್ಕೊಂಡ್ರೇನಂತೆ ಇಲ್ಲಿ, ಅಲ್ಲಿ ಬೇರೆಯವರು ಸಿಕ್ಕಿ ನಂಗೆ ಹೆಂಗೂ ವಾಸಿ 5 ರೂ ಗಿಟ್ತು" ಎಂದು ಸಂತೈಸುವಷ್ಟರಲ್ಲೇ, ಅವನು ತಿರುಗಿ ........ ... . ... ಆದ.

—ಶ್ರೀ. ಹೊನ್ನಮ್ಮ ಎಲ್. ಮೂರ್ತಿ.

# ಪೋಗದಿರೆಲೊ!

( ಶಂಕರಾಭರಣ ರಾಗ — ಅಟತಾಳ )

ಪೋಗದಿರೆಲೊ ರಂಗ ಕಾಲೇಜಿಂದಾಚೆಗೆ ॥ ಪ ॥
ಭೋಗವಂತರು ಭಂಡರೆತ್ತಿಕೊಂಡಾಡರೊ ॥ ಅ. ಪ ॥

ಬರಿ ಬಿ ಎ ಬಿ ಎಸ್‌ಸಿ ಬೇಟಿ ಎಮ್ಮೆಯುಮಾಡಿ
ಪರಮಾನ್ನವ ಕಾಣದಲೆಯುವರೊ
ದೊರಕದ ನೌಕರಿ ದೊರಕೀತು ನಿನಗೆಂದು
ಮರುಕದಿಂದಲಿ ಜಾತಿ ಹೆಸರೆತ್ತಿಕೊಂಬರೊ

ಅಗಣಿತ ಬರದಲ್ಲಿ ಅಧಿಕ ಮಾಸದಂತೆ
ಮದುವೆಯ ಮಾಳ್ಪರು, ಜೋಪಾನವೇ
ಪದವಿಯ ಮಾಣಿಕ್ಯ ಲಭಿಸೀತು ನಿನಗೆಂದು
ದಿಗಿಲು ಗಾಬರಿಯಿಂದ ಬೆಂಗಚ್ಚಿಕೊಂಬರೊ

ದುಷ್ಟಚಾಡಿಯರು ನಿನ್ ದೃಷ್ಟೀಲಿ ನಲಿಯುತ
ಅಟ್ಟಟ್ಟಿ ಮುಷ್ಟಿಯ ಬಿಗಿಯುವರೊ
ಹಿಟ್ಟೇಗೆ ತಂದೆ ತಾಯಿ ಕೊಟ್ಟು ಕಳಿಸೋತಂಕ
ಗಟ್ಟ್ಯಾಗಿ ಕಾಲೇಜ ಕಟ್ಟಿಕೊಂಡಿರೊ, ರಂಗಾ

—ವೀ. ಸೀ.

# ಆಯಿತಿನ್ನೇನ್ !

ಈ ಬಾರಿ ಫೇಲಾದ
ಕಣ್ಣೀರ ಕಂದರಿರ !
ಚಿಕ್ಕ ತಂಗಿಯರಾ !
ಪುಟ್ಟ ತಮ್ಮದಿರಾ !
ಕೊರಗದಿರಿ, ಸೊರಗದಿರಿ,
ಸೊರಗಿ ಸುಸ್ತಾಗದಿರಿ !
ಕೊರಳ ಬಿಗಿಯದಿರಿ !

ಪಾಸುಫೇಲುಗಳೆರಡು
ಬರಡು, ಕುರುಡು,
ಪಾಸಾದ ಬೃಹಸ್ಪತಿಗೆ
ಮೆಡಲು ಪಡೆದಿದ್ದರೂ
ಜಾಬೊಡನೆ ಬರ್ಕುಮೆ ?
ಫೇಲಾದ ವನಸ್ಪತಿಗೆ
'ಸಾಬಿ'ನ್ನು ತಕ್ಕುದೆ ?

ಪಾಸು ನಪಾಸುಗಳೆಲ್ಲ
ಬೀಸುವಾ ಛಾನ್ಸು !
ನಂಬರೀಯುವ ಹಸ್ತ
ಲೇಖನಿಯು ಝುಳಪಿಸಲು
ಸೊನ್ನೆ ಹತ್ತಾಗುವುದು !
ಹತ್ತು ನೂರಾಗುವುದು !

ಕಾಕ ಪುಡಿಚರೆ ಪಾಸು
ಬಾಲವಾಡಿಸೆ ತುಂಡು !

ಮರಳಿ ಯತ್ನವ ಮಾಡಿ
ತೂಕಡಿಸುತೋದಿ !
ಕೂಪಗಳ ಹುಡುಕದಿರಿ
ಸುಮ್ಮನೇ ಸಿಡುಕದಿರಿ
ಕಾದಿಹವು ಬಾ ಎಂದು
ಸ್ವಾಗತವ ನೀಡುತ್ತ—
ಚಲ ಚಿತ್ರಮಂದಿರವು
ರಂಗಿನೆಲೆ ಸ್ಪೋಟುಗಳು
ಸಂಗೀತ ನೃತ್ಯಗಳು
ಮರಳಿ ಖುಷಿಯಲಿ ತೇಲಿ
ಮರಳಿ ಕೃಷಿಯನು ಮಾಡಿ !

ಹಕ್ಕಿ ಪ್ರಶ್ನೆಯ ಕೇಳಿ,
ಲಕ್ಕಿ ಲಾಕೆಟ್ ಧರಿಸಿ,
ಅಂಗೈಯ ಗೆರೆಗೀಟು
ಹೆಂಗಿದೆ, ನೋಡಿಕೊಳಿ !
ಆಯಿತಿನ್ನೇನ್ ! ಏಳಿ
ಕೂಳಿಗೆದ್ದೇಳಿ !

—ಬಿ. ಸ್ವಾ. ಮತ್ತು ಪಾಟೀಳ.

# ಉಚಿತ ಪ್ರಚಾರ

ಇತ್ತೀಚೆಗೆ ಪ್ರಕಟವಾದ 'ಒಂದೇ ದಾರಿ' ಎಂಬ ಪುಸ್ತಕ ನೋಡಿದಾಗ, ಗ್ರಂಥಕರ್ತರನ್ನು ನಾನುಕರಣ ಸಾಮರ್ಥ್ಯಕ್ಕಾಗಿ ಅಭಿನಂದಿಸಬೇಕೆಂದು ನಮಗೆ ಅನ್ನಿಸಿತು. ಒಂದೇ ಕಡೆಗೆ ದಾರಿಮಾಡಲಾಗಿರುವ ರಸ್ತೆಗಳ ಎರಡು ಕೊನೆಗಳಲ್ಲೂ ರಾರಾಜಿಸುತ್ತಿರುವ ONE WAY ಎಂಬ ಸಂಚಾರ ಸೂಚನೆಯನ್ನೇ ಅವರು ತಮ್ಮ ಸಂಕಲನದ ಹೆಸರಾಗಿ ಆರಿಸಿರುವಂತಿದೆ. ಅಂದರೆ, ಅಂಥ ಬೋರ್ಡುಗಳೆಲ್ಲ ಅವರ ಗ್ರಂಥದ ಉಚಿತ ಜಾಹಿರಾತುಗಳಾದುವು.

ಸೊಗಸಾದ ಯೋಚನೆ! ಅನುಕರಣೀಯವಾದ ಯೋಚನೆ. ಇತರ ಬರಹಗಾರರೂ ಇಂಥ ಹೆಸರುಗಳನ್ನಿಟ್ಟು ಉಚಿತಾನುಕೂಲಪಡೆಯುಬಹುದು. ಕನ್ನಡ ಸಾಹಿತಿಗಳಿಗೆ ಸರ್ವವಿಧದಿಂದಲೂ ಸಹಾಯಮಾಡಲೆಳೆಸುತ್ತಿರುವ ನಾವು ಈ ಸಂದರ್ಭದಲ್ಲಿ ಇಂಥ ಇನ್ನೂ ಹಲವು ಹೆಸರುಗಳನ್ನು ಸೂಚಿಸಲು ಇಚ್ಛಿಸುತ್ತೇವೆ. ಆಯಾ ಹೆಸರಿನ ಗ್ರಂಥದಲ್ಲಿ ಅವರು ಬರೆಯುಬಹುದಾದ ವಿಷಯಗಳ ರೂಪರೇಖೆಯನ್ನೂ ಅವರ ಪ್ರೋತ್ಸಾಹಕ್ಕಾಗಿ ಕೊಡಲಾಗಿದೆ. ಹೀಗೆ, ಹೆಸರಿಟ್ಟರೆ, ನಗರಗಳಲ್ಲಿ ಆಯಾ ಬೋರ್ಡುಗಳು ಎಲ್ಲಿದ್ದರೂ ಅವು ಅವರ ಗ್ರಂಥಗಳ ಜಾಹಿರಾತುಗಳಾಗುತ್ತವೆ.

ನಾಯಿಗಳಿವೆ : ಸರಳರಗಳೆ, ಮಿಲ್‌ಮಾಲೀಕ, ಕೂಲಿಕಾರರ ಸಂಘ, ಇತ್ಯಾದಿ ಆಧುನಿಕ ಗೋಳ್ಗವನ

ದೊಂಗಲುನ್ನಾರು : ಕಾದಂಬರಿ, ಶಾನುಭೋಗ ಪಟೇಲ, ಮಾವ ಅಳಿಯ, ಭಿಕ್ಷು ಭಿಕ್ಷುಕ, ಸಾಹೇಬ ಗುಮಾಸ್ತೆ, ಬೆಕ್ಕು ಹಾಲು........ ಇತ್ಯಾದಿ

ಉಗುಳಬೇಡಿ : ಸಾಮಾಜಿಕ ನಾಟಕ, ಮನೆ ಮಠ ಮಡಿ ಆಚಾರ ಅತ್ತೆ ಸೊಸೆ ತಿರುಪತಿ ತೀರ್ಥ .. .....ಬೂದಿ ಮುಚ್ಚಿದ ಭಂಡ

ಬಸ್ ಸ್ಟಾಪ್ : ಅಸಹಕಾರ ಚಳುವಳಿಯ ಐತಿಹಾಸಿಕ ಕಥೆ....ತಳ್ಳುವವರು, ಕುಳ್ಳಿರುವವರು ; ಫ್ರೀ ಸರ್ವಿಸಿನವರು ; ಫ್ರಂಟ್‌ಸೀಟಿನವರು........ವಿಷಾದಾಂತ

ಪಬ್ಲಿಕ್ ರಸ್ತೆ ಅಲ್ಲ : ದಾಂಪತ್ಯ ಜೀವನದ ಸರಳ ಸುಂದರ ಸುಖಮಯ ಸ್ವಪ್ನ ಸಾಹಿತ್ಯ....ಹೊಂಗನಸು ಹೆಂಗನಸು, ತಂಪು ಕಂಪು ಪೆಂಪು ಸೊಂಪು ಇತ್ಯಾದಿ........

ಕಾಲುದಾರಿಯಲ್ಲೇ ನಡಿಯಿರಿ : ವಿದ್ಯಾಭ್ಯಾಸ ಕ್ರಮದ ವಿಮರ್ಶಾತ್ಮಕ ಪ್ರಬಂಧ ....ಗುರುವಿಗೆ ತಿರುಮಂತ್ರ, ಅಪ್ಪನಟ್ಟ, ಆಲಮರ, ಎತ್ತು ಈಯಿತು, ಈಸಬೇಕು ಜೈಸಬೇಕು ಇತ್ಯಾದಿ. ನೈತಿಕ ಗ್ರಂಥ

ಟಿಕೀಟಿನ ವಿವರ : ಸನಾತನ ಧರ್ಮ ಪದ್ಧತಿಗಳ ನಿರ್ಭಯ ನಿರಂಕುಶ ವಿಚಾರ ವಿನಿಮಯ, ದೇವರು ದಿಂಡರು, ಹಬ್ಬ ಗಿಬ್ಬ, ನಾಮದ ಬಲ ವೊಂದಿದ್ದರೆ ಸಾಕು, ಇತ್ಯಾದಿ

ಹೊರಕ್ಕೆ ದಾರಿ : ಆಡಳಿತ ರೀತಿ ನೀತಿಗಳ ಶಾಸ್ತ್ರೀಯ ಶಿಕ್ಷಣ ಗ್ರಂಥ, ದುಡಿತ ಹಿಡಿದ ಕಿಡಿತ - ತುಂಬೆ ಗಿಡಕ್ಕೆ ಏಣಿ, ದೊಣ್ಣೆನಾಯಕನ ಅಪ್ಪಣೆ........ಇತ್ಯಾದಿ, ವಿಚಾರ ಪ್ರಚೋದಕ ಪ್ರಬಂಧಃ

# ಸುಘೋಷಿತ ರತ್ನಾನಿ

1. ಚಿನ್ನಾ ಸಮಂ ನಾಸ್ತಿ ವಿಭಾಗ ಭೀಷಣಂ
2. ಭೂಯೋಪಿ ಸಿಕ್ತಂ ಅಜದಾಘೃತೇನ ನ ಚಿನ್ನಪಕ್ಷೇ ಮಧುರತ್ವ ಮೇತಿ
3. ಏನಕೇನ ಪ್ರಕಾರೇಣ ಪಾರಿಟೀ ಗ್ರಹಣೋ ಭವೇತ್
4. ಐಕ್ಯಾತುರಾಣಾಂ ನ ಸುಖಂ ನ ನಿದ್ರಾ
5. ಲಂಚಂ ವಿನಾ ನ ಶೋಭಂತೆ ಗುಮಾಸ್ತಸ್ಯ ಕರಂಭುವಿ
6. ಚಿನ್ನಸ್ಯ ಚೋಪವಾಸಸ್ಯ ಪಾರಣಂ ಅಸಮಾಜನಂ
7. ಕದನ್ನಂ ಭಕ್ಷಯೇನ್ನಿತ್ಯಂ ಜಾಯತೆ ತಾದೃಶೀಜ್ವರಂ
8. ವಿನಾಶಕಾಲೆ ವಿಪರೀತ ದಾಹಂ
9. ಅನ್ನದಾನಂ ಸರ್ವದಾನಾತ್ ಪ್ರಯಾಸಂ

# ಬುದ್ಧಿಯ ಮಟ್ಟ

(ಆತ್ಮ ಪರೀಕ್ಷೆ)

1. ಆರಿಹೋದ ಹಾಲನ್ನು ಮಹಲಿಂಗ ರಂಗಕವಿ ಯಾವುದಕ್ಕೆ ಸಮವೆಂದು ಹೇಳಿದ್ದಾನೆ? (1 ಮುತ್ತೈದೆ. 2 ಪರಮಹಂಸ. 3 ಕನ್ನಡನುಡಿ. 4 ಜೀವನ 5 ಚಂದ್ರ).

2. ಪದ್ಯಂ ವಧ್ಯಂ, ಎಂದು ಧೈರ್ಯವಾಗಿ ಒಪ್ಪಿಕೊಂಡಿರುವ ಕನ್ನಡ ಕವಿಯಾರು? (1 ಡಿ. ವಿ. ಜಿ. 2 ಹೊನ್ನಮ್ಮ. 3 ಮುದ್ದಣ. 4 ಸಿ ಕೆ. ವೆಂಕಟರಾಮಯ್ಯ. 5 ಬೆಟಗೇರಿ).

3. ಹರಿಹರಕವಿಯ ಅಭಿಪ್ರಾಯದಂತೆ, ಯಾವಾಗ, 'ನುಡಿಯೆ, ಹು ಹು ಎಂಬುದೇ ಕಡೆಯ ಮಾತು'? (1 ಹೆಣ್ಣು ಗೊತ್ತಾದಾಗ. 2 ರಾಜಾಸ್ಥಾನದಲ್ಲಿ. 3 ಶಿವ ದರ್ಶನವಾದಾಗ. 4 ಚಳಿಯಲ್ಲಿ ನಡುಗುವಾಗ 5 ಓದು ಪೂರೈಸಿದಾಗ).

4. ಜಗನ್ನಾಥದಾಸರ ಮಾತಿನಂತೆ, ಹಾಸಿಗೆಯಲ್ಲೇ ಮಲಗಿಕೊಂಡು ಹಾಡಿದರೆ, ಏನಾಗುತ್ತೆ? (1 ಬೆನ್ನುಫಣಿ ಉಂಟಾಗುತ್ತೆ. 2 ಮನೆಯವರು ಓಡಿಹೋಗುತ್ತಾರೆ. 3 ಸೂರು ತಲೆಯಮೇಲೆ ಬೀಳುತ್ತೆ 4 ದೇವರು ಕೂತು ಕೇಳುತ್ತಾನೆ. 5 ನಾಲಗೆ ಸೀದುಹೋಗುತ್ತೆ),

5 ಪ್ರಾಚೀನ ಕನ್ನಡ ಕವಿಯೊಬ್ಬನು, 'ಸ್ವಾದಿಸಲಮೃತ ಸರಳಿನಿಂ ನಿರ್ಮಿಸಿದ ಲತೆ' ಎಂದು ವಿವರಿಸಿರುವುದು ಯಾವುದನ್ನು? (1 ಊರ್ವಶಿ. 2 ವೀಳ್ಯ. 3 ತನ್ನ ಕಾವ್ಯ. 4 ಶಿಲಾಬಾಲಿಕೆ. 5 ಜಿಲೇಬಿ).

6. "ಎಲವೆಲವೋ! ಕವಿ! ಕೊಲ್" ಎಂದು ನುಡಿದಿರುವ ಕನ್ನಡ ಕವಿಯ ಹೆಸರೇನು? (1 ನಾರಣಪ್ಪ. 2 ಅ. ನ. ಕೃ. 3 ಪುಟ್ಟಪ್ಪ. 4 ಶ್ರೀನಿವಾಸ. 5 ಸುದಾಮ).

7. ಎಣ್ಣೆ ತುಪ್ಪ ಇವೆರಡನ್ನೂ ಬೆರಸಿ ಮಾರುವವರನ್ನು ನಯಸೇನ ಕವಿ ಯಾರಿಗೆ ಹೋಲಿಸಿದಾನೆ? (1 ಹೆಣ್ಣುವೇಷದ ಗಂಡು ನಟರು. 2 ಕಾಗೆ ಗೂಡಿನಲ್ಲಿ ಬೆಳೆವ ಕೋಗಿಲೆಗಳು. 3 ಜಾತಿವಿಜಾತಿಗೆ ಮದುವೆಮಾಡಿಸುವವರು. 4 ಕನ್ನಡದಲ್ಲಿ ಪರಭಾಷೆ ಮಿಶ್ರಮಾಡುವವರು. 5 ಬುದ್ಧಿವಂತ ವ್ಯಾಪಾರಿಗಳು).

—ಶ್ರಾರಾಂಕ.

(ಕೊನೆಯ ಪುಟವನ್ನು ತಿರುಗಿಸಿ ನೋಡಿ)

# ಮೂದರೀ ಸಾಹಿತ್ಯ ಭಂಡಾರ

## ಚಿತ್ರದ ಪುರ

ನಮ್ಮಲ್ಲಿಂದ ಎಲ್ಲ ಬಗೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ, ಬೇಕಾದ ಪಠ್ಯ ಪುಸ್ತಕಗಳೂ ಕಥೆ ಕಾದಂಬರಿ ನಾಟಕ ಇತ್ಯಾದಿಗಳೂ ದಿನವೂ ಹೊರಬೀಳುವುವು. ಕಾಗದಕ್ಕೆ ಮಿತಿಮೀರಿ ಬೆಲೆ ಏರಿರುವ ಈ ಕಾಲದಲ್ಲಿ ನಮ್ಮ ಈ ತೂಕದ ಗ್ರಂಥಗಳೆಲ್ಲ ಕೂಡಲೇ ಖರ್ಚಾಗುತ್ತಿವೆ. ಆದ್ದರಿಂದ, ಅವುಗಳ ಅಗತ್ಯವಿರುವವರು ಕೂಡಲೆ ಬಂದು ಸಾಗಿಸಿಕೊಂಡು ಹೋಗಬೇಕಾಗಿ ವಿನಂತಿ. ಒಂದುವೇಳೆ ನಮ್ಮಲ್ಲಿ ದೊರೆಯದಿದ್ದರೂ, ಗ್ರಂಥಕರ್ತರ ಮನೆಗಳಿಂದ ರಾಶಿರಾಶಿಯಾಗಿ ಹಳೇ ಪೇಪರಿನ ದರದಲ್ಲಿ ಸಿಗುತ್ತದೆಂಬ ಭರವಸೆ ಕೊಡಬಲ್ಲವು.

### ಪಠ್ಯಪುಸ್ತಕಗಳು : ವಿದ್ಯಾರ್ಥಿಯರಿಗೆ

ರೇಷನ್ ರಾಮಾಯಣ : ಯುದ್ಧಕಾಂಡ
ಬಯಲಾಟ ಅಥವಾ ಕ್ರಿಕೆಟ್ ಬಿಕ್ಕಟ್ಟು (ನಾನ್ ಡಿಟೈಲ್)
ಮಂಗನ ಮದುವಿ (ಕಾದಂಬರಿ)
ವ್ಯಾಕರಣ - ಕ್ಯಾಕರಣಾ ? (ನೋಟ್ಸ್)
ಪಾಕಿಸ್ಥಾನ್ ಭೂವಿವರಣೆ........ಬಿ. ಭಾಗ
ಸಿ. ಭಾಗ
ಪ್ರೇಕ್ಷಕರ ಗ್ಯಾಲರಿಯಿಂದ (ರಗಳೆ)

### ಪಠ್ಯಪುಸ್ತಕಗಳು : ವಿದ್ಯಾರ್ಥಿನಿಯರಿಗೆ

ಅತ್ತೆಮ್ಮನ ಅಪಚಾರಗಳು.....ಗದ್ಯ
ಲಂಕಿಣ್ಯೋಪಾಖ್ಯಾನ ....ಪದ್ಯ
ಸತ್ಯವಾನನ ಸೋಲು } ಕಥೆ
ರಂಗಿನಮುಂದೆ ಮಂಗನೆ ? } ಕಥೆ
ಜಾರ್ಜೆಟ್ ಬಿಟ್ಟು ....(ನಾನ್ ಡಿಟೈಲ್)
ಸಮಾಜದಲ್ಲಿ ಕಸೂತಿ
ಕೈಬಳೆಯ ಕ್ರೀಡಿ

## ಇತರ ಗ್ರಂಥಗಳು

ಸಿನಿಮ ಪ್ರೇತಾವಳಿ (ಸಚಿತ್ರ)
ಅಣೋರಣೀಯಾನ್, ಅಥವಾ ವಿಜ್ಞಾನದ ಅಜ್ಞಾನ (ಶಾಸ್ತ್ರಗ್ರಂಥ)
ಆಧುನಿಕ ಬ್ರಹ್ಮಹತ್ಯಾ ವಿಧಾನ (ರಾಜಕೀಯ)
ಕವಿಜೀವನ (ವಿಷಾದಾಂತಕಥೆ)
ಸಿಪಾಯಿಯ ಸಂಕಟ (ಪ್ರಣಯ ಕಥೆ)
ನೆರೆಯಾಕೆ ಗಂಡ (ಪ್ರಗತಿ ಸಾಹಿತ್ಯ)
ಸೌಟ್ ಕೈಪಿಡಿ (ಪಾಕಶಾಸ್ತ್ರ)
ಬರೀ ಕೈಲಿ ಹುಳಿ ಹಾಕುವುದು (ಪಾಕಶಾಸ್ತ್ರ)
ಧಿತ್ತೈಥಾ........ ...(ನೃತ್ಯ ಗೀತ ಸಂಗ್ರಹ)।
ಕಳಬೇಡ, ಕೊಲಬೇಡ (ವಿಮರ್ಶೆ)
ಮೈಸೂರು ಮಕ್ಕಳಿಗಾಗಿ (ತೆಲುಗು ಪ್ರಥಮ ಪಾಠ)
ಕಲ್ಲು ಸಿಕ್ಕರೆ ಕೊಳ್ಳಿರೋ (ರೇಷನ್ ನಿಯಮಾವಳಿ)

## ಶಿಶು ಸಾಹಿತ್ಯ

ಯಾಕೆ ಬಂದೆ ಎಲೆ ಜೀವ ?
ಪಾಕಂಪಪ್ಪು
ಚಲೊ ಜುಗ್ ಜುಗ್ ಜುಗ್

ಇತ್ಯಾದಿ ಇತ್ಯಾದಿ ಇತ್ಯಾದಿ

—ವಿ. ಸ್ವಾ.

---

## ಮಾಮೂಲು

ಭಕ್ತವತ್ಸಲ ಮಂತ್ರಿ ಮಾಲುಾಲ ಖಂಡಿಸಿಯೆ
ಇತ್ತಿರುವನಾಜ್ಞೆಯನು — ಇಂಥ ಆಜ್ಞೆಯೂ
ಮತ್ತೆ ಮಾಮೂಲೆ ಆಯ್ತು ! ಸರ್ವಜ್ಞ

* * *

“ಸ್ವಾಮಿ ! ನನ್ನ ಮಗ ಪರೀಕ್ಷೆಯಲ್ಲಿ ಪಾಸಾದ. ಮುಂದಕ್ಕೆ ಓದಲೇಬೇಕು ಎಂದು ಹಠ ಹಿಡಿಯುತ್ತಿದಾನೆ. ಏನುಮಾಡಲಿ ?” (ವಾಚಕರೆ ಪ್ರಶ್ನೆ) .. .. ಕಾಲೇಜು ಸೇರಿಸಿ ; ಹಠ ಸರಿಹೋಗುತ್ತೆ.

# ಮೋಟಾರ್ ವಿಮೆ

ಕಾಲುದಾರಿಯಮೇಲೆ ನಡೆದು ಹೋಗುತ್ತಾ ಇದ್ದ, ಶಂಭುಭಟ್ಟ. ರಸ್ತೆ ಮಧ್ಯದಲ್ಲಿ ಒಂದು ನಾಯಿ ಓಡಾಡುತ್ತಿತ್ತು. ಮೋಟಾರು ಬಂತು-ಇನ್ನೇನು ನಾಯಿ ಮೇಲೆ ಹರಿಯಬೇಕು ಎನ್ನುವಾಗ ಕಷ್ಟಪಟ್ಟು ಸಂಚಾಲಕನು ಮೋಟಾರನ್ನು ತಿರುಗಿಸಿದ. ಅದು ಕಾಲುದಾರಿ ಹತ್ತಿ ಶಂಭುವಿನ ಮೇಲೆ ಹರಿದು, ಶಂಭು ಹರೋ ಹರ!—ಸಂಚಾಲಕನಿಗೆ ಐವತ್ತು ರೂಪಾಯಿ ಜುಲ್ಮಾನೆ. ಶಂಭು ಮನೆಯವರು ಪಾಪರ್.

ಇಂತಹ ಸಂದರ್ಭಗಳನ್ನು ಅನ್ಯಾಯಗಳನ್ನು ನಿರ್ಮೂಲಮಾಡಲೋಸುಗ ಘನಹೊಂದಿದ ನಮ್ಮ ಸರ್ಕಾರದವರು ದಾರಿಹೋಕರ ಅಪಘಾತವಾದರೆ, ಅವರ ಸಂಬಂಧಿಗಳಿಗೆ ಅನುಕೂಲವಾಗುವಂತೆ ಮೋಟಾರ್ ವಿಮಾ ಪದ್ಧತಿಯನ್ನು ಆಚರಣೆಗೆ ತಂದಿದ್ದಾರೆ ಎನ್ನಿ—ಕಾನೂನು ಮೂಲಕ.

ಘಮಘಮಿಸುವ ರೋಜಾ ಹೂವಿಗೂ ಹಿನ್ನೆಲೆಯಲ್ಲಿ ಮುಳ್ಳೆ
ಕುತ ಕುತ ಕುದಿಯುವ ಬೆಣ್ಣೆಯ ತಳದಲ್ಲೂ ಮಣ್ಣೆ—

ಅಂತೇ ಈ ವಿಮಾಕಾನೂನು ಬಂದಮೇಲಂತೂ ಉಪಯೋಗ ಹಾಗಿರಲಿ, ವೃತ್ತಪತ್ರಿಕೆಗಳ ತುಂಬಾ ಇದೇ ಕತೆಗಳು ಬರಲಾರಂಭಿಸಿವೆ.

—ರಾಮು ಆಗಲೇ ಮೂವತ್ತು ವರ್ಷ ಮೀರಿದ್ದ. ಅಣಿಯಾದ ಹೆಂಡತಿ ಮಣಿಯಂತಹ ಮೂರು ಮಕ್ಕಳು. ಬೆಂಬಲನೀಡುವ ಮಾವನಿಲ್ಲ, ಅಂಬಲಿ ಕುಡಿಯಲು ಕಾಸಿಲ್ಲ. ಬ್ರಾಹ್ಮಣ ಅಂದಮೇಲೆ ನಿರುದ್ಯೋಗಿ ಎಂದು ಹೇಳಬೇಕೆ? ವಿಮೆಮಾಡಿ ಪ್ರಾಣಬಿಟ್ಟರೆ ಹೆಂಡಿರು ಮಕ್ಕಳಿಗೆ ಅನ್ನಕ್ಕೆ ದಾರಿ. ಹೌದು, ಆದರೆ ವಿಮೆಮಾಡಲು ಹಣ? ಅದಿದ್ದರೆ ಏಕೆ ಸಾಯಬೇಕು? ಮೋಟಾರು ವಿಮಾ ಕಾನೂನು ಬಂತು.

ಸಾಯಂಕಾಲ ಚಿಕ್ಕಪೇಟೆಯಲ್ಲಿ ಗಲಾಟೆಯೋ ಗಲಾಟೆ. ಕಾರಿನ ಮೇಲೆ ಕಾರು, ಮಧ್ಯೇ ಮಧ್ಯೇ ಸ್ಥಳ ಇದ್ದಲ್ಲಿ ಜಟ್ಕಾ. ಜವಳಿ ಅಂಗಡಿ ಮೆಟ್ಟಿಲ ಮೇಲೆ ನಿಂತಿದ್ದ ರಾಮು. ದೂರದಿಂದ ವೇಗವಾಗಿ ಮೋಟಾರು ಬಂತು. ಇವನೂ ಹೆಜ್ಜೆಯಿಟ್ಟ, ನಿರಾಯಾಸ ಮರಣ ಹೆಂಡಿರು ಮಕ್ಕಳಿಗೆ ವಿಮಾ ಕಂಪೆನಿಯವರು ತಿಂಗಳಿಗೆ ೬೦ ರೂ. ವಂತೆ ಮಾಸಾಶನ ಕೊಡಬೇಕೆಂದು ನ್ಯಾಯಸ್ಥಾನದ ತೀರ್ಪು. ಸತ್ತು, ರಾಮು ಸಂಸಾರ ನಿರ್ವಹಿಸಿದ—

ಯುದ್ಧಾನಂತರದ ನಿರುದ್ಯೋಗಿಗಳಿಗೆ ಏನು ಹುಮ್ಮಸ್ಸು ಅಂತೀರಿ ಈಗ, 'ಬಿಡಯ್ಯಾ, ಬೇಜಾರಾದರೆ ಮೋಟಾರಿಗೆ ಅಡ್ಡ ನಿಂತರೆ ಆಯಿತು. ಸಂಸಾರ

ಸುಸೂತ್ರ. ಇದಕ್ಕೇನು ಇಷ್ಟು ಹೆದರಿಕೆ ? ' ಎನ್ನುವ ಧೈರ್ಯ. ಮಧ್ಯದಾರಿಯಲ್ಲೇ ನಿಂತು ಮಾತನಾಡುವ ತರುಣರು. ತಮ್ಮದೇ ರಸ್ತೆ ಎಂದು ಅಡ್ಡಾದಿಡ್ಡಿ ತಿರುಗಾಡುವ ಯುವಕರು, ಇವರದೇ ಆಗಿಬಿಟ್ಟಿದೆ.

ಮೋಟಾರೀಕನಿಗೆ ಒಂದೇ ಯೋಚನೆ,— ಹೀಗೆ ಹಣ ಸಂಪಾದಿಸಲು ಸುಲಭ ಮಾರ್ಗ ಯಾಕಾರೂ ಸರ್ಕಾರ ತೋರಿಸಿಕೊಟ್ಟಿತೋ ಎಂದು.

ಇದರ ಫಲ ಏನಾಯ್ತು ಗೊತ್ತೆ. ವರ್ಷದ ಕೊನೆಯಲ್ಲಿ ಲೆಕ್ಕ ನೋಡಿದರೆ ಸಾವಿರ ಮೋಟಾರು ಅನಾಹುತಗಳಲ್ಲಿ ಸಾವಿರ ಜನರೂ ಒಂದೇ ಸಂಗಡದವರೇ ಆಗಿತ್ತು. ಅಯ್ಯೋ! ಸರಕಾರದ ಹಣವೆಲ್ಲಾ ಈ ರೀತಿ ಒಂದೇ ಕೋಮಿನವರಿಗೇ ಹೋಯ್ತು. ಎನನ್ಯಾಯ! ರೇಷ್ಯೋ ಪ್ರಕಾರ ಈ ಕಾನೂನು ಮಾರ್ಪಾಡಾಗಬೇಕು ಎಂದು ಚಳುವಳಿ ಆರಂಭವಾಯ್ತಂತೆ.

ಮುಂದೇನು ಮಾಡುತ್ತಾರೋ ನೋಡಬೇಕು, ಕಾನೂನೇ ಕಳಚಿ ಹೋಗುತ್ತೋ, ಏನೋ—

— ಮೋಟಾರಿಕ.

—— ——

‘‘ ಮದ್ರಾಸ್ ಪ್ರಾಂತದ ಮಿಲ್‌ಬಟ್ಟೆ ವ್ಯವಸ್ಥೆ ಹೇಗಿದೆ ಅಂದರೆ, ಹತ್ತು ಸಂಸಾರಗಳಿಗೆ ಒಂದು ಸಾರಿ ಮಾತ್ರ ಕೊಡಬಲ್ಲೆವು ’’ (ಪ್ರ ಮಂತ್ರಿ) ..... ಅದೂನೂ ವರ್ಷಕ್ಕೊಂದೇಸಾರಿ.

* * *

‘‘ ಖದ್ದರ್ ಬಟ್ಟೆ ಬೇಕಾದರೆ ನೂಲು ತರಬೇಕು ಸ್ವಾಮಿ ’’

‘‘ ಆಗಲಿ ! ಅದೆಲ್ಲಿ ಮಾರುತ್ತಾರೆ, ಹೇಳಿ ”

* * *

‘‘ ಅಮೇರಿಕನ್ ಸೈನಿಕರ ಸಮಾಧಿಗಳು ಬರ್ಮಾ ಕ್ಷೇತ್ರದಲ್ಲಿ ಎಲ್ಲೆಲ್ಲಿವೆ ಎಂದು ಹುಡುಕಿ ನಿರ್ಧರಿಸಲು ಹೊರಟಿದ್ದ ನಾಲ್ಕು ಅಧಿಕಾರಿಗಳು ವಿಮಾನ ಅನಾಹುತದಿಂದ ಬರ್ಮಾದಲ್ಲಿ ಬಿದ್ದು ಸತ್ತರು ” (ಸುದ್ದಿ)

* * *

ಒಂದೊಂದು ಹೆಜ್ಜೆಗೂ ಒಂದೊಂದು ಗಜ ಹಾರುವ ಮಹಿಳೆಯರನ್ನು ಗಜಗಮನೆಯರು ಎಂದು ಹೇಳಬಹುದೆ, ಎಂದು ನಮ್ಮನ್ನು ವಾಚಕರೊಬ್ಬರು ಕೇಳಿದಾರೆ.

* * *

# ಪ್ರಶ್ನೆಗೆ ಉತ್ತರ

ಒಂದು ದಿನ ಸಂಜೆಯಲಿ ಗೆಳೆಯನನು ಕೇಳಿದೆನು
ಚೆಂದ ನಿನಗಾವುದೆಂದು
ನಮ್ಮಿಂದ್ರ ಭವನವೋ ನಿಮ್ಮಿಂದ್ರ ಭವನವೋ
ಚೆಂದ ನಿನಗಾವುದೆಂದು

ನಮ್ಮೋಟ್ಲು ಚಂದವೋ, ನಿಮ್ಮೋಟ್ಲು ಚಂದವೋ
ಎಂದೆನ್ನ ಕೇಳಬೇಕೆ ?
ನಮ್ಹೋಟ್ಲ ಕುರ್ಚಿಯಲಿ, ನಿಮ್ಹೋಟ್ಲ ತಿಂಡಿಗಳ
ವಿಸ್ತರಿಸಿ ಹೇಳಬೇಕೆ ?—
ನಮ್ಹೋಟ್ಲು ಚೆಂದವೋ ನಿಮ್ಹೋಟ್ಲು ಚೆಂದವೋ
ಎಂದೆನ್ನ ಕೇಳಲೇಕೆ ? — ಓ ಗೆಳೆಯ
ಸುಮ್ಮನಿರು ಎಂದನಾತ

ನಮ್ಹೋಟ್ಲ ಬಾಗಿಲಲಿ ಬರಹಗಳು ಮುಖದೋರಿ
ಬೋರ್ಡುಗಳು ಮೈಯತೂಗಿ
ಬಣ್ಣಬಣ್ಣದ ಬರಹ ಗೋಡೆಗಳನಾವರಿಸಿ
ನಗುತಲಿದೆ ದಾರಿತೋರಿ
ನಗುನಗುತ ನಮ್ಹೋಟ್ಲ ಸರ್ವರೂ ಬರುತಿರಲು
ನಿಮ್ಹೋಟ್ಲ ತಿಂಡಿಗಾಗಿ
ನಮ್ಹೋಟ್ಲಿಗಿಂತಲೂ ನಿಮ್ಹೋಟ್ಲೆ ಸುಖವೆಂದು
ನಿಲ್ಲಿಸಿತು ಹೊಟ್ಟೆಕೂಗಿ
ನಮ್ಹೋಟ್ಲು ಚೆಂದವೋ, ನಿಮ್ಹೋಟ್ಲು ಚೆಂದವೋ
ಎಂದೆನ್ನ ಕೇಳಲೇಕೆ ?— ಓ ಗೆಳೆಯ
ಸುಮ್ಮನಿರು ಎಂದನಾತ

ನಿಮ್ಹೋಟ್ಲ ತಿಂಡಿಗೇ ನಮ್ಹೋಟ್ಲ ಬಿಟ್ಟಾಗ
ಓಡಿದುದು ದಾರಿ ವೇಗ
ನಿಮ್ಮ ಮಾಣಿಯು ಕೂಗು ಭವನವನೆ ತುಂಬಿತ್ತು
ನಿಮ್ಹೋಟ್ಲು ಸೇರಿದಾಗ
ಬಾಗಿಲಾ ಬಳಿ ಬಂದು ನೀನು ನನ್ನನು ಕಂಡು
ಬಾರೆಂದು ಕೂಗಿದಾಗ
ತಲೆಯುಲೇನೋ ನಿಂದು, ಕಣ್ಣಲೇನೋ ಬಂದು
ಜೋಬು ತಂಪಾದುದಾಗ
ನಮ್ಹೋಟ್ಲು ಚೆಂದವೋ ನಿಮ್ಹೋಟ್ಲು ಚೆಂದವೋ
ಎಂದೆನ್ನ ಕೇಳಲೇಕೆ ?—ಓ ಗೆಳೆಯ
ಸುಮ್ಮನಿರು ಎಂದನಾತ

[ಕವನ ಸಂದರ್ಭ :—ನೀವು ಚಂದ್ರಭವನದ ಪಾಲಕರೆನ್ನಿ, ನಿಮ್ಮಗೆಳೆಯ ಇಂದ್ರಭವನದ ಅಳಿಯನೆನ್ನಿ. ಒಂದು ದಿನ ನಿಮ್ಮ ಗೆಳೆಯ ನಿಮ್ಮ ಹೋಟ್ಲಿಗೇ ತಿಂಡಿಗೆ ಬಂದನೆನ್ನಿ. ಆಗ ನಿಮ್ಮ ಹೋಟ್ಲಿನ ಬಗ್ಗೆ ಅವನ ಅಭಿಪ್ರಾಯವನ್ನು ತಿಳಿಯಬೇಕೆಂದು ನಿಮ್ಮ ಮನಸ್ಸಿನಲ್ಲಿ ಆಶೆ ಬರುವುದು. ಆಗಿನ ಸಂಭಾಷಣೆಯೇ ಇದರ (ಈ ಪದ್ಯದ !) ಜನ್ಮದ ಕಾರಣ.]

—ಹೊನ್ನಪ್ಪ.

—o—

ಇಂಡೋನೇಸಿಯದ ಡಾ॥ ಷರೀರ್‌ರವರು ಭಾರತಕ್ಕೆ ೫ ಲಕ್ಷ ಟನ್ ಅಕ್ಕಿ ಕೊಡುವುದಾಗಿ ಭರವಸೆಕೊಟ್ಟಿದ್ದಾರೆ : ಅದಕ್ಕೇ ಹೇಳುವುದು ನಮ್ಮವರು : "ಪರೋಪಕಾರಾರ್ಥಂ ಇದಂ ಷರೀರಂ" : ಅಂತ.

* * *

"ಕ್ರಿಪ್ಸ್‌ರವರಿಗೆ ಗಾಂಧಿಜಿಯ ವೈದ್ಯರ ಚಿಕಿತ್ಸೆ"……… ಚಿಕಿತ್ಸೆಮಾಡಿಸಿದ ಗಾಂಧಿಜಿಗಿಂತ, ನಾವು ಮಾಡಿಸಿಕೊಂಡ ಕ್ರಿಪ್ಸರನ್ನೇ ಕೊಂಡಾಡುತ್ತೇವೆ.

* * *



"ಇದು ಮದ್ರಾಸು ಸ್ವಾಮಿ, ಹುಷಾರಾಗಿರಬೇಕು, ಅಜ್ಞಾನವಾಗಿದ್ರೆ ಎಗರ್ಸಿ ಬಿಡ್ತಾರೆ..............."

# ನೋಡುಕ್ಕೆ ಹೇಗಿದ್ದಾಂ......ತ!

ನೋಡುಕ್ಕೆ ಎಷ್ಟು ಚೆನ್ನಾಗಿದ್ದ ಅಂತೀರಿ ಅವನು, ದುಂಡು ಮುಖ ಗುಂಗರು ಕೂದಲು, ನೇರನಾದ ವಾರೆ ಬೈತಲೆ, ಬಿಳಿ ಪೈಜಾಮು, ಶುಭ್ರವಾದ ಜುಬ್ಬಾ. ಆ ಆರೆ ಬಾಗಿಲಿನ ಮುಂದೆ ನಿಂತಿದ್ದಾಗ, ಮುಕ್ಕಾಲು ಮನ್ಮಥನ ಹಾಗೇ ಕಾಣಿಸಿದ. ಇಷ್ಟು ಚೆನ್ನಾಗಿರುವವನ ಅಂಗಡಿಗೆ ಹೋಗಿ 'ಕ್ರಾಪ್' ಮಾಡಿಸಿಕೊಂಡರೆ, ಅದೇ ರೀತಿ ನಾನೂ ಕಾಣಬಹುದೇನೋ ಎಂದು ಅವನ ಆಯುಷ್ಕರ್ಮ ಶಾಲೆಗೆ ಕಾಲಿಟ್ಟೆ. 'ಬನ್ನಿ ಸಾರ್ ಬನ್ನಿ ಬನ್ನಿ' ಎಂದು ಅವನೂ ನಗುತ್ತಾ ನನ್ನನ್ನು ಆದರದಿಂದ ಬರ ಮಾಡಿಕೊಂಡು ಒಳಕ್ಕೆ ಕರೆದುಕೊಂಡು ಹೋದ.



ಅವನಿದ್ದಿದ್ದ

ಕುರ್ಚಿಯ ಮೇಲೆ ಎತ್ತರವಾಗಿ ಕೂರಿಸಿ,–ಅಧ್ಯಕ್ಷರನ್ನು ಕೂರಿಸುವಂತೆ–ಮೈಗೆಲ್ಲಾ ಮಗ್ಗಲು ಹಾಸಿಗೆ ಸುತ್ತಿ ಕತ್ತರಿ ಬಾಚಣಿಗೆ ಹಿಡಿದು ಕೆಲಸಕ್ಕೆ ಶುರು ಮಾಡಿದ. ಆ ಮಾತು ಈ ಮಾತು ಆಡುತ್ತಾ ತನ್ನ ಕಾರ್ಯ ನಡೆಸುತ್ತಲೇ ಇದ್ದ. 'ಹೇಗಿರಬೇಕು ಸಾರ್' 'ಮೀಡಿಯಂಟ್' 'ಕ್ಲೋಸೋ' ಅಂದ. ಮೀಡಿಯಮ್ಮಾದರೆ ತಿರುಗಿ ಒಂದೇ ತಿಂಗಳಿನಲ್ಲಿ ಬರಬೇಕಲ್ಲಾ ಎಂದು 'ಕ್ಲೋಸ್' ಎಂದೆ.

ನೋಡಿ! ನೀವು ದಿಟ ಹೇಳಿದರೂ ನಂಬುತ್ತೀರಿ ಸುಳ್ಳು ಹೇಳಿದರೂ ನಂಬುತ್ತೀರಿ, ಒಂದೊಂದೇ ಕೂದಲನ್ನು ಹಿಡಿದುಕೊಂಡು, ಕತ್ತರಿಸಲಾರಂಭಿಸಿದ. ನನಗೆ ಹಾಗೇ ತೋಚಿತು; ಏಕೆಂದರೆ ಒಂದು ಗಂಟೆಯಾಯಿತು, ಇನ್ನು ತಲೆ ಹಿಂಭಾಗವೇ ಮುಗಿದಿರ ಲಿಲ್ಲ. ಇನ್ನು ಅಕ್ಕಪಕ್ಕ ಯಾವಾಗ, ಮುಂದೆಲೆ ಸರಿಮಾಡಿ ಗುಂಗುರುಪಡಿಸುವುದು ಯಾವ ದಿನ ಎಂದು ಯೋಚನೆಗೆ ಆರಂಭವಾಯಿತು. ಅವನೂ ನನ್ನ ತಲೆ ಕೂದ ಲಿನ ವಿಚಾರ ಯೋಚಿಸುತ್ತಾನೆ, ನಾನೂ ಅದೇ ತಲೆ ಕೂದಲಿನ ವಿಚಾರ ಮಾಡಿದರೆ ಏನು ಪ್ರಯೋಜನ ಎಂದು. ರಾಜಕೀಯ ಯೋಚಿಸಲು ಶುರುಮಾಡಿದೆ–ತಲೆ ಕೂದಲಿನ ಹಾಗೆ ಸಮಸ್ಯೆ ಬೆಳೆದಿರುವುದು ಹೇಗೂ ರಾಜಕೀಯವಲ್ಲವೇ–ಅದಕ್ಕೇ ನೇನೋ ಆ ವಿಷಯ, ಸಂಬಂಧಿಸಿದ ಯೋಚನೆಗಳ ತರಹ ತೋಚಿದ್ದು—

ಶರತ್‌ಚಂದ್ರರನ್ನು ಆರಿಸಿದರೆ ಸುಭಾಷರು ಭಾರತಕ್ಕೆ ಬರುತ್ತಾರೋ ಏನೋ, ಮುಸ್ಲಿಂ ಲೀಗಿನಲ್ಲಿಲ್ಲದವ ಮುಸಲ್ಮಾನನೋ ಅಲ್ಲವೋ ಎಂದು ಜಿನ್ನಾರವರ ಶಂಕೆಗೆ ಕಾರಣವುಂಟೋ ಇಲ್ಲವೋ, ಭಾರತದ ಮುಸಲ್ಮಾನರನ್ನು ವಿಲಾಯಿತಿಯವರು ಇಷ್ಟು ಬೂಚಿ ಬೂಚಿ ಮಾಡಲು, ಪ್ಯಾಲಿಸ್ಟೈನ್ ಈಜಿಪ್ಟಿನ ಭಯವೇ ಕಾರಣವೇ–ಅಥವಾ? ........? ಸಂಸ್ಥಾನಗಳಿಗೆಲ್ಲಾ ಸ್ವಾತಂತ್ರ್ಯ ಇರುವುದಾದರೆ–ಮಾಕೀಸ್ಥಾನ ಎಂದು ಆಂಧ್ರರು ಏಕೆ ಕೂಗಿಡಬಾರದು? ಬಾಕೀಸ್ಥಾನ ಎಂದು ಮಾರ್ವಾಡಿಗಳು ಆಗಲೇ ಬೊಬ್ಬೆ ಇಟ್ಟಿಯೇ ಇದ್ದಾರೆ, ಸಾಕೀಸ್ಥಾನ ಎಂದು ಕಾಶ್ಮೀರದ ಕೂಗೂ ಹುಟ್ಟಿ ದೆಯೇ? ಕಾಕೀಸ್ಥಾನ ಎಂದು ಸೈನಿಕರೂ, ಟಾಕೀಸ್ಥಾನ ಎಂದು ಚಿತ್ರ ನಿರ್ಮಾಪ ಕರೂ, ನಾಕೀಸ್ಥಾನ ಎಂದು ಮಂತ್ರಿಗಳೂ ಆಗಲೇ ತಮ್ಮ ತಮ್ಮ ಹಕ್ಕುಗಳನ್ನು ಭದ್ರಪಡಿಸಿಕೊಂಡಿದ್ದಾರೆಯೋ?–ಯಾರು ಎಲ್ಲಾದರೂ ಹೇಗಾದರೂ ಹೋಗಲೀ, ಕ್ಯಾಜಿ! ರಾಜಾಜೀಬಿ ರಹತಾನ್ಯೆ? ಎಂದು ಅನುಮಾನ ಉಂಟಾಗುತ್ತದೆಯೇ?

ಈ ರೀತಿ ಮನಸ್ಸು ಬೇಕಾಬಿಟ್ಟಿಯಾಗಿ ಹಾರಾಡಿ ಓಡಾಡುತ್ತಿತ್ತು. ಆ ವೇಳೆಗೆ 'ಷೇವಿಂಗ್ ಸಾರ್?' ಎಂದು ಯಾರೋ ಎಲ್ಲೋ ಪಾತಾಳದಿಂದ ಕೂಗಿದ ಹಾಗಾಯ್ತು, ಎಚ್ಚೆತ್ತೆ.

ನೋಡಿದರೆ ಗುಂಗುರು ಕೂದಲಿನವನ, ಆಯುಷ್ಕರ್ಮಶಾಲೆಯ ಕುರ್ಚಿ. ನಾಳೆ ಬೆಳಿಗ್ಗೆ, ಮುಖ ಬೋಳಿಸಿಕೊಳ್ಳುವುದು ತಪ್ಪಿತಲ್ಲಾ ಎಂದು ಈಗಲೇ 'ಷೇವಿಂಗಿ'ಗೆ ಹೂ ಎಂದೆ. ಮುಖ ಎಲ್ಲಾ ಮಾಡಿದ. ಅಂತಿದ್ದೆ–

ಕನ್ನಡಿಯಲ್ಲಿ ನೋಡುತ್ತೇನೆ. ತಲೆ ಹಿಂದೆಲ್ಲಾ ಚೌರ ಮಾಡಿದಂತೇ ಕಾಣು ತ್ತಿತ್ತು. ಅಕ್ಕಪಕ್ಕದ ಕೂದಲಿನ ಸುಳಿವೇ ಇಲ್ಲ ಮುಂದೆಲೆಯಲ್ಲಿ ಗುಂಗುರುಗೂದಲೂ ಇಲ್ಲ. ನೇರಸಾದ ಬೈತಲೆಯೂ ಇಲ್ಲ. ಅವನ ತಲೆ ನೋಡಿದೆ. ನನ್ನ ತಲೆ ಕನ್ನಡಿ ಯಲ್ಲಿ ನೋಡಿದೆ. ಕಣ್ಣಿನಲ್ಲಿ ನೀರು ಉಕ್ಕಿಬಂತು. ಎದೆ ಹಾರಿತು, ಗಂಟಲೊಳಗೆ



# ನಾನಾದದ್ದು

ಏನೋ ಬಂದು ಅದುಮಿದಂತಾಯ್ತು. ಕೆನ್ನೆಯು ಬಿಳುಪೇರಿತು–ಅಯ್ಯೋ! ಅನ್ನಿಸಿತು ಮನಸ್ಸು.

ಕೇಳಿದೆ, ಬಾಯಿಬಿಟ್ಟು ನಾಚಿಕೆಯಿಲ್ಲದೆ, 'ಏಮಯ್ಯಾ ನೀಕು ಅಂತ ಬಾಗ ಕ್ರಾಪು ಉಂದಿ, ನೀಯಷ್ಟ್ಲನೇ ನಾಕೂ ಚೇಸ್ತಾವು ಅನಿ ವಸ್ತೆ ಇಷ್ಟ್ಲಲಾ ನೂವು ಚೇಸೇದಿ ? ' ಎಂದು.

ಅವನಂದ 'ಪೂಕಿ ಎಂಟಿಕಲೇ ಲೇವು, ನೇನೇಮಿ ಚೇಸ್ತನು ? ಉಂಡಿಂದಾಂಟ್ಲೋ ಏಮೋ ಚೇಸಿನಾನು' ಎಂದು.

'ಉಂಡಿಂದಾಂಟ್ಲೋ ಏಮಿ, ಉಂಡಿಂದಂತಾ ತೀಸೇಸಿನಾವ್ ಕದಾ' ಎಂದಂದುಕೊಂಡು ಖಿನ್ನಮನಸ್ಕನಾಗಿ ಬರಿ ತಲೆಯಲ್ಲಿ ಹಿಂತಿರುಗುವಾಗ ಹೊಳೆಯಿತು :

ನಮ್ಮ ರಾಜಕೀಯಕ್ಕೂ ಇಷ್ಟೆ. ಕೂದಲಿನ ಹಾಗೆ ಬೆಳೆದ ಸಮಸ್ಯೆಗಳ ಪಾಡೂ ಕೂದಲಿನ ಹಾಗೆಯೋ–ಏನೋ–

ಕ್ರಿಪ್ಸಶ್ಚ ಲೀಗೋಕಾಂಗ್ರೆಸ್, ಮುಂಡನಂ ವಪನಂ ತಥಾ !

"ಇತ್ಯಮರಹ".

—ಶಿವಣ್ಣ.

# —● ನಾನು ನೋಡಿದ ಕ್ರಿಕೆಟ್ ಮ್ಯಾಚು ●—

(ಇಂಗ್ಲೆಂಡಿಂದ ಬಂದ ಪತ್ರ)

---

ತಮ್ಮಯ್ಯ ಮಾವಗೆ ಪುಟ್ಟು ಮಾಡುವ ಅನಂತಾನಂತ ನಮಸ್ಕಾರಗಳು. ನಾನು ಇಲ್ಲಿ ಈವರೆಗೆ ಕ್ಷೇಮ. ಇಲ್ಲಿ ಮಳೆ ಗಾಳಿ ಚಳಿ ವಿಪರೀತವಾಗಿವೆ. ಇದೇ ಅಂತೆ ಇಲ್ಲಿಯವರಿಗೆ ಬೇಸಿಗೆ ಕಾಲ! ನಾನು ಎಲ್ಲ ವಿಧದಲ್ಲೂ ಹುಷಾರಾಗಿದೇನೆ. ನನ್ನ ಮದುವೆ ವಿಚಾರದಲ್ಲಿ ನೀವು ನಾನು ಬರುವತನಕ ಯಾವ ನಿರ್ಧಾರಕ್ಕೂ ಬರ ಬೇಡಿ. ಅಲ್ಲಿಂದ ನಾನು ತಂದ ಚಟ್ನಿಪುಡಿ ಆಗಲೇ ಮುಗಿದುಹೋಯಿತು. ಪುಟ್ಟ ತಾಯಿ ಹತ್ತಿರ ಹೇಳಿ ಇನ್ನೊಂದಿಷ್ಟುಮಾಡಿಸಿ ಏರ್‌ಮೇಲಲ್ಲಿ ಕಳುಹಿಸಿಕೊಡಿ. ಶಾಂತಾ ಈಗ ಕೂಸು ಸಹಿತವಾಗಿ ಹಾಸನಕ್ಕೆ ಹೋಗಿರುತ್ತಾಳೆ, ತಾನೆ. ಇಲ್ಲಿಗೆ ಇಂಡ್ಯಾದಿಂದ ಬಂದಿರುವ ಭಾರಿ ಕ್ರಿಕೆಟ್ ಟೀಮಿನ ಆಟ ನೋಡಲು ನಾನೂ ಮೊನ್ನೆ ಹೋಗಿದ್ದೆ, ಅಂತ ನಾಣಿಗೆ ಹೇಳಿ ಘಟಿಂಗ, ಅವನು ಅಲ್ಲಿ ನನ್ನನ್ನ ಸದಾ ಕೀಟಲೆ ಮಾಡುತ್ತಿದ್ದ, ಪುಟ್ಟುವಾಯಿತು ಪುಸ್ತಕವಾಯಿತು, ಅವನಿಗೆ ಕ್ರಿಕೆಟ್ ಅಂದರೆ, ಆಟವೋ ಕೀಟವೋ, ಗೊತ್ತಿಲ್ಲ, ಅಂತ. ಮೊನ್ನೆ ನಾನು ಎಲ್ಲಾನೂ ತಿಳಿದುಕೊಂಡೆ. ಕ್ರಿಕೆಟ್ ಅಂದರೆ, ಏನೋ ಅಂತ ಇದ್ದೆ. ಶುದ್ಧ ಹುಚ್ಚು ಹುಚ್ಚು! ನಾಣಿಗೆ ಹೇಳಿ, ನನಗದೆಲ್ಲ ಗೊತ್ತಾಗಿಹೋಯಿತು, ಅಂತ. ಇನ್ನು ಮೇಲೆ ಅವನ ಕೈಲಿ ನನ್ನನ್ನ ದಬಾಯಿಸುವುದಕ್ಕಾಗುವುದಿಲ್ಲ, ಅಂತ.

ಬಟ್ಟಬಯಲಲ್ಲಿ ಆ ಕಡೆ ೩ ಕಡ್ಡಿ, ಈ ಕಡೆ ೩ ಕಡ್ಡಿ ನೆಲಕ್ಕೆ ಸಿಕ್ಕಿಸಿರುತ್ತಾರೆ. ಅದರ ಸುತ್ತ ಕ್ಲೀನಾಗಿ ಬಿಳಿ ಬಟ್ಟೆ ಉಲ್ಲನ್ ಸ್ವೆಟರ್ ತೊಟ್ಟುಕೊಂಡ ಧಾಂಡಿಗ ಮಹರಾಯರು, ಘಟ್ಟಳಿಗೊಂಬೆಗಳು, ಒಂದಿಷ್ಟು ಬಿಸಿಲು ಹೊಡೆಯಲಿ ಮಳೆ ಸುರಿ ಯಲಿ ಮಂಕುಕವಿಯಲಿ, ಸದಾ ಗಸ್ತು ತಿರುಗುತ್ತಿರುತ್ತಾರೆ, ಶತಪಥಮಾಡುತ್ತ.... ಅಲ್ಲವೇನೋ, ನಾಣಿ! ಜಂಟಲ್‌ಮನ್ನುಗಳಿಬ್ಬರು ಉದ್ದನೆಯ ಬಿಳಿಕೋಟು ಜೇಬಿ ನೊಳಕ್ಕೆ ಕೈತುರುಕಿಕೊಂಡು ನಿಂತಕಾಲಲ್ಲೇ ಅವರು ಮಾಡುವ ತಮಾಷೆಯನ್ನೆಲ್ಲ ನೋಡುತ್ತ ಕಣ್‌ಕಣ್ ಬಿಡುತ್ತಿರುತ್ತಾರೆ.

ಕಾಸುಗೀಸು ಎಸೆಯುತ್ತಾರೆ; ತಲೆಬಾಲ ನೋಡುತ್ತಾರೆ; ಎಲ್ಲರೂ ಅಲ್ಲಲ್ಲಿ ಸೆಟೆದು ನಿಂತುಕೊಳ್ಳುತ್ತಾರೆ. ಒಂದು ಪಕ್ಕದ ಕಡ್ಡಿಗಳ ಹಿಂದೆ ಒಬ್ಬ ಮಹಾ ವಿಚಿತ್ರ ವ್ಯಕ್ತಿ ಸೊಂಟ ಬಗ್ಗಿಸಿ ಭವತಿಭಿಕ್ಷಾಂದೇಹಿ ಅಂತ ಕೈನೀಡಿಕೊಂಡು ಹಲ್ಲು ಕಿರಿಯು ತ್ತಾನೆ. ಯಾಕೊ, ಏನೋ ಅವನನ್ನ ಕಾಣುತ್ತಲೂ, ಎದುರುಗಡೆಯಿಂದ ಒಬ್ಬ ಮಹರಾಯ ಕೋಪಾವೇಶದಲ್ಲಿ ಕುಣಿದು ಕುಪ್ಪಳಿಸಿ ಥಂಗನೆ ಹಾರಿ, ಬಿಳಿಕೋಟಿನ ಜಂಟಲ್‌ಮನ್ನನ್ನೂ ದಾಟಿಕೊಂಡು ಓಡೋಡಿ ನುಗ್ಗಿ ಕೈಲಿರುವ ಕೆಂಚುಕಲ್

ಚೆಂಡನ್ನ ಆತನ ಮೂತಿಗೆ ಗುರಿಯಿಟ್ಟು, ಬೀರುತ್ತಾನೆ. (ಆ ಬಿಳಿ ಕೋಟಿನವನ ತಲೆಯ ಮೇಲೆ ಯಾಕೆ ಅಷ್ಟೊಂದು ಹ್ಯಾಟುಗಳು? ಒಂದರ ಮೇಲೊಂದು? ಗೋಪುರದ ಹಾಗೆ?) ಹೀಗೆ, ಯಾವನಾದರೂ ಒಬ್ಬ ಬುದ್ಧಿಸ್ತಿಮಿತ ತಪ್ಪಿ ತನ್ನ ಮೇಲೆ ತೂಕವಾದ ಚಂಡನ್ನೆಸೆದರೆ ಗತಿ ಏನು ಅಂತ ಆ ವಿಚಿತ್ರ ವ್ಯಕ್ತಿ ಕೂಡ ಆಗಲೇ, ಸದ್ಯಃ, ತಕ್ಕ ಎಚ್ಚರಿಕೆ ತೆಗೆದುಕೊಂಡಿದಾನೆ. ಎರಡು ಕೈಗಳಿಗೂ ದಪ್ಪ ದಪ್ಪ ದಿಂಬಿನ ತುಂಡುಗಳನ್ನು ಬಿಗಿದಿದಾನೆ. ಮುಂಡಿಯುದ್ದ ಎರಡು ಕಾಲುಗಳಿಗೂ ನೀಳವಾದ ದಿಂಬುಗಳು ಬೇರೆ.

ಆದರೂ, ಆ ಕೋಪಾವೇಶದ ಎದುರಾಳಿ ಬೀರಿದ ಚೆಂಡು ಆತನ ಮೈಮೇಲೆ ಬೀಳುವ ಹೊತ್ತಿಗೆ, (ಆತನ ಸ್ನೇಹಿತ ಇರಬೇಕು) ಮತ್ತೊಬ್ಬ ಆಟಗಾರ ಅದನ್ನು ಅಗಲವಾದ ಹಲಗೆಯೊಂದರಿಂದ ತಡೆದು ನಿಲ್ಲಿಸಿದ. ಬೀಳುವ ಚೆಂಡು ತಪ್ಪಿದರೆ ಸಹಸ್ರಾಯುಸ್ಸು, ಎಂದು ಆ ವಿಚಿತ್ರವೀರ್ಯ, ನೀಡಿದ ಕೈಗಳನ್ನು ಹಿಂದಕ್ಕೆಳೆದು, ಮುಖದ ಮೇಲಿನ ಬೆವರೊರಸಿಕೊಂಡು ನೆಟ್ಟಗೆ ನಿಲ್ಲುವವೇಳೆಗೆ, ಎದುರುಗಡೆಯಿಂದ ಮತ್ತೊಂದು ಚೆಂಡು ಅವನನ್ನು ಹುಡುಕಿಕೊಂಡು ಬರುತ್ತದೆ! ಪಾಪ! ತನ್ನ ಸ್ನೇಹಿತನ ಬೀರಾಟ ಬೀಸಾಟಗಳಿಲ್ಲದೆ ಹೋದರೆ, ಆತನ ಮೈತುಂಬ ಬಾಸುಂಡೆಗಳು ಸಿದ್ಧ. ಅಂಥಾದ್ದರಲ್ಲಿ, ಹಠ ಹಿಡಿದು, ಯಾಕೆ ಅಲ್ಲಿ ಹಾಗೆ ನಿಲ್ಲಬೇಕೊ, ಕಾಣೆ. ಚೆಂಡು ಎಸೆಯುವ ಪುಂಡನನ್ನು ಪೋಲೀಸಿಗೆ ಕೊಟ್ಟುಬಿಟ್ಟು ಹಾಯಾಗಿ ಮನೆಗೆ ಹೋಗಿ ಹೊಗೆ ಸೇದುತ್ತಾ ಬಿದ್ದಿರಬಾರದೆ, ಅಷ್ಟುಜನವೂ? ಈ ಇಂಗ್ಲಿಷರ ಮನೋಭಾವ ಅರ್ಥಮಾಡಿಕೊಳ್ಳುವುದೇ ಕಷ್ಟ. ಎಸೆಯುವುದಕ್ಕೆ ಅವಕಾಶ ಕೊಟ್ಟಮೇಲೆ, ಧೈರ್ಯವಾಗಿ ಎದೆಕೊಡಬಾರದೆ? ದಿಂಬು ಕಟ್ಟಿಕೊಳ್ಳೋದು ಏಕೆ? ಗೂಟದ ಹಿಂದೆ ಅವಿತುಕೊಳ್ಳೋದೇನು? ಹಲಗೆ ಸ್ನೇಹಿತನ ಸಹಾಯ ಕೋರುವುದೆಂದರೇನು? ಥೂ.

ಕೆಲವೇಳೆ, ಹಲಗೆ ಹಿಡಿದ ಆಸಾಮಿ ಆ ಹಾಳು ಚೆಂಡನ್ನ ದೂರಕ್ಕೆ ಹೊಡೆದು ಅಟ್ಟುತ್ತಾನೆ. ಆಗಿನ ಕೋಲಾಹಲವೇ ಕೋಲಾಹಲ. ನಾಲ್ಕಾರು ಜನ ಅದರ ಹಿಂದೆ ಜಿಂಕೆ ಮರಿಗಳ ಹಾಗೆ ಓಡಿ ಅದನ್ನು ಎತ್ತಿ ತಂದು ಮತ್ತೆ ಆ ಮುಂಗೋಪಿಯ ಕೈಗೆ ಕೊಡುತ್ತಾರೆ. ಹೊಡೆದವನೂ ಕೂಡ, ಸುಮ್ಮನೆ ನಿಂತಿರುವುದಿಲ್ಲ. ಅವನೂ ವಿಪರೀತ ರೇಗಿರುತ್ತಾನೆ. ಬಂದ ಕೋಪದಲ್ಲಿ, ಅವನು ಹಲಗೆ ಸಹಿತವಾಗಿ, ಎಸೆದವನ ಹತ್ತಿರಕ್ಕೆ ಓಡುತ್ತಾನೆ. ಅಲ್ಲಿ, ಆ ಕಡೆ ನಿಂತಿರುವ ಉದ್ದನೆಯ ಅಂಗಿಯ ಜಂಟಲ್‌ಮನ್ನನ್ನು ಕಾಣುತ್ತಲೂ, ಹೆದರಿ ಮತ್ತೆ ಸ್ವಸ್ಥಾನಕ್ಕೆ ಓಡಿಬರುತ್ತಾನೆ. ಆಗ, ಅದೇ ಉಡುಪಿನ ಮತ್ತೊಬ್ಬ ಅಲ್ಲೂ ಇರುವುದನ್ನು ಕಂಡು ಮತ್ತೊಮ್ಮೆ ಅತ್ತ ಕಡೆ ಧಾವಿಸುತ್ತಾನೆ. ಅದುವರೆಗೂ ತೆಪ್ಪಗಿದ್ದ ಮತ್ತೊಬ್ಬ ಹಲಗೆಯವನಿಗೂ ಇದೇ ಹುಚ್ಚು ಹಿಡಿದು, ಇಬ್ಬರೂ ಪರದಾಡಿ ಹರಿದಾಡಿ ಉಸಿರುಕಟ್ಟಿಕೊಂಡು ಒಂದೊಂದು ಕಡೆ ನಿಂತುಕೊಳ್ಳುತ್ತಾರೆ. ಇಂಥ ಗಡಿಬಿಡಿಯಲ್ಲಿ, ಜನ ತಳಮಳಿಸುತ್ತಿರುವಾಗ,

ಕೆಲವು ವೇಳೆ ಯಾರೋ ಒಬ್ಬ ಎಲ್ಲೋ ಜ್ಞಾನದಲ್ಲಿ ಚೆಂಡನ್ನು ಸಂಪಾದಿಸಿ, ಆ ವಿಚಿತ್ರವ್ಯಕ್ತಿಯ ಕೈಗೆ ಕೊಡುವುದೂ ಉಂಟು. ಕೂಡಲೆ, ಅವನು ಅದನ್ನ ಮುಯ್ಯಿಗೆ ಮುಯ್ಯಿ ತೀರಿಸುವುದಕ್ಕೆ ಅಂತ ಉಪಯೋಗಿಸುವುದೇ ಇಲ್ಲ. ಪಾಪ! ಅದನ್ನು ತನ್ನ ಎದುರಿಗಿರುವ ಕಡ್ಡಿಗಳ ಮೇಲೆ ಎಸೆದು ಹೊಟ್ಟೆ ಉರಿ ತೀರಿಸಿಕೊಳ್ಳು ತ್ತಾನೆ. ಗುರಿಯಿಟ್ಟು ತನ್ನ ಶತ್ರುವಿನ ಮೂತಿಗೆ ಎಸೆದಿದ್ದರೆ, ಯಾರೂ ಬೇಡ ಅನ್ನುವ ಹಾಗಿಲ್ಲ. ಆದರೂ, ಆತ ಬಹಳ ತಾಳ್ಮೆಯಿಂದ ವರ್ತಿಸುತ್ತಾನೆ. ಆದರೆ, ಸುತ್ತ ನಿಂತಿರುವ ಯುವಕರೆಲ್ಲ " ಹೌಸಾಟ್ '' ಹೌಸಾಟ್ " ಎಂದು ಕೂಗುತ್ತಾರೆ. ಆ ಮಾತು ಯಾವ ಡಿಕ್ಷನರಿಯಲ್ಲೂ ಇಲ್ಲ. ಆದರೂ, ಟೋಪಿ ಗೋಪುರದವನಿಗೆ ಅರ್ಥವಾಗುತ್ತದೆ. ಅವನು ಕೈಹಲಗೆಯುವರ ಪೈಕಿ ಒಬ್ಬನನ್ನು ಮನೆಗೆ ಕಳುಹಿಸು ತ್ತಾನೆ. ಅವನು ಉದ್ದಕ್ಕೂ ತಿರುಗಿ ನೋಡುತ್ತ, ಗೊಣಗುಟ್ಟುತ್ತ, ಹೊರಬಂದು, ಮೆತ್ತಗೆ ಮತ್ತೊಬ್ಬನನ್ನು ಕಳುಹಿಸಿಕೊಡುತ್ತಾನೆ. ಹೀಗೇ ಎಸೆದಾಟ, ಪರದಾಟ ಗಳು ಮುಂದುವರಿಯುತ್ತವೆ

ಮತ್ತೊಂದು ತಮಾಷೆ! ಐದು ನಿಮಿಷಕ್ಕೊಂದು ಸಲ, ಎಸೆಯುವವನನ್ನು ಬದಲಾಯಿಸುತ್ತಾರೆ. ಹೊಸ ತೋಳಿನವನೊಬ್ಬ, ಅಂಗಿಬಿಚ್ಚಿ, ಹತ್ತಿರದ ಜಂಟಲ್ ಮನ್ ಹೆಗಲಿಗೆ ತಗಲುಹಾಕಿ, ಟೋಪಿ ತೆಗೆದು ಆವನ ಶಟಗೋಪುರದ ಮೇಲಿಡು ತ್ತಾನೆ. ಅನುಕೂಲಕ್ಕೆ ತಕ್ಕಂತೆ, ಬಲಗೈಯನ್ನೋ ಎಡಗೈಯನ್ನೋ, ಬೀಸಿ ಬಿಸಿ ಮಾಡಿ ಕೆಂಡಕಾರಿ ನೆಗೆದು ಭಂಗಿಸಿ ಅವನೂ ಪ್ರಾರಂಭಮಾಡುತ್ತಾನೆ, ಕಡ್ಡಿ ಹಿಂದಣ ಧಾಂಡಿಗನ ಮೂಗು ಮುರಿಯುವ ಸಾಹಸಕ್ಕೆ! ಹೊಸ ಬೀರ ಬಂದ ತಕ್ಷ ಣವೇ ಆಟಗಾರರೆಲ್ಲ ತಮ್ಮ ತಮ್ಮ ಜಾಗ ಬದಲಾಯಿಸಿ, ಕೈಬೀಸಿಕೊಂಡು ಬಯಲೆಲ್ಲ ತುಳಿದಾಡಿ, ಕಡೆಗೆ ಸೊಂಟಬಗ್ಗಿಸಿ ಕತ್ತು ನೀಡಿಕೊಂಡು ನಿಲ್ಲುತ್ತಾರೆ. ಆ ವಿಚಿತ್ರ ವೀರ್ಯನಿಗೂ ಸ್ಥಾನಪಲ್ಲಟಕ್ಕೆ ಅವಕಾಶಕೊಡುತ್ತಾರೆ. ಉದ್ದಂಗಿ ಮಹರಾಯರೂ ಕೂಡ ಕಾಲಾಡಿಸಿ ಕದಲುತ್ತಾರೆ. ಒಳ್ಳೆಯ ವಕ್ರಪುಚ್ಛಗಳು ಅವು ಎರಡೂ! ನೆನೆದರೆ ನನಗೆ ಈಗಲೂ ನಗು ಬರುತ್ತದೆ.

ಹೀಗೆ, ಅವರೆಲ್ಲ ಗೋಳಾಡಿಕೊಂಡು, ನಮ್ಮನ್ನೂ ಗೋಳಾಡಿಸುತ್ತಿರುವ ಸಮಯದಲ್ಲಿ ನನ್ನ ಕಣ್ಣಿಗೆ ಇನ್ನೊಂದು ಸೋಜಿಗ ಕಾಣಿಸಿತು. ಆ ಬಯಲ ಅಂಚಿ ನಲ್ಲಿ ಒಂದುಕಡೆ ಭಾರಿ ಬೋರ್ಡು ಒಂದು ಹುಟ್ಟಿಕೊಂಡಿತ್ತು. ಸುಮಾರು ೧೨ ಅಡಿ ಎತ್ತರ; ೧೮ ಅಡಿ ಅಗಲ! ಯಾವುದೋ ಸ್ಕೂಲು ಮೇಷ್ಟರು ಲೆಕ್ಕ ಬೇರೆ ಮಾಡಿ ದ್ದರು ಅದರ ಮೇಲೆ. ಏ ಬಿ ಸಿ ಡಿ ಬೇರೆ ಅದರಲ್ಲಿ, ದಪ್ಪದಪ್ಪವಾಗಿ. ಅದನ್ನು ನೋಡಿದಾಗ ನನಗೆ ಅಯ್ಯೊ, ಮಂಕರಾ! ಅನ್ನಿಸಿತು. ಹಾಯಾಗಿ ಆ ಬೋರ್ಡನ್ನೇ ಎಳೆದುತಂದು ಆ ಕಡ್ಡಿಗಳ ಹಿಂದೆ ನಿಲ್ಲಿಸಿ ಬಿಟ್ಟಿದ್ದರೆ, ಅಷ್ಟು ಕಷ್ಟವೂ ಸುಲಭದಲ್ಲೇ ತಪ್ಪುತ್ತಿತ್ತಲ್ಲಾ! ಅದರ ಮೇಲೆ ತಮ್ಮ ತೋಳುಗಳೆರಡೂ ಕಿತ್ತು ಬೀಳುವತನಕ

ಆ ಸಿಡುಕರಿಬ್ಬರೂ ಚೆಂಡೆಸೆದುಕೊಳ್ಳಲಿ, ಠಪಾ, ಠಪಾ, ಅಂತ ಗುರಿ ಬೇರೆ ತಪ್ಪುವ ಹಾಗಿಲ್ಲ. ಯಾರಿಗೂ ಏನೂ ಅಪಾಯವೂ ಇಲ್ಲ. ದಿಂಬುಕಟ್ಟಿಕೊಂಡು ಆತ ಕಡ್ಡಿಗಳ ಹಿಂದೆ ಕಣ್ಣಾಮುಚ್ಚಾಲೆ ಕುಣಿಯಬೇಕಾಗಿಯೂ ಇಲ್ಲ. ಅವನ ಗೆಳೆಯರು ಹಲಗೆ ತುಂಡು ಹಿಡಿದು ಹೊಡೆದಟ್ಟಿಸಿ ಎಸೆದವನ ಮೇಲೆ ರೇಗಿ ಬೀಳಬೇಕಾಗಿಯೂ ಇಲ್ಲ.

ಮುಖ್ಯ, ಮೆದುಳು ಬೇಕು. ಸಮಯೋಚಿತವಾಗಿ ಬೆಳಕು ಹೊಳೆಯಬೇಕು. ಇಂಥ ಆಟವನ್ನ ಇವರ ಜೊತೆ ಆಡುವುದಕ್ಕೆ ಅಂತ ನಮ್ಮೂರಿಂದ ನವಾಬರೂ ವಿಜಯವ್ಯಾಪಾರಿಗಳೂ ಏಕೆ ಬರಬೇಕೊ, ದೇವರೇಬಲ್ಲ. ನಾಣಿಯೇ ಬಲ್ಲ!

ಇತಿ, ಪುಟ್ಟಶಾಮು, ಎಂ. ಎಸ್‌ಸಿ.
ಬ್ರಿಹ್ಮಿಂಗಾಂ.

---

## ಒಂದು — ಎರಡು

ಧಾರೆ ಮುಗಿಯಿತು... ಮದುವಣಿಗ ಗುಂಡ ..
ಹರ್ಷ ಹುಮ್ಮಸ್ಸಿನಲಿ ನುಡಿದನು

ಪಕ್ಕದಲಿ ಕುಳಿತಿರ್ದ ತನ್ನ ನವವಧು ಲೀಲಳಿಗೆ
" ಓ ಎನ್ನ ಜೀವನದ ಗೆಳತೀ....

ಇನ್ನೇನೆಮಗೆ ! ಇಂದಿನಿಂ ನಾವೀರ್ವರೊಂದೇ ...
ಅಗ್ನಿ ಸಾಕ್ಷಿಯಲೆಂದೆಂದಿಗುಂ....

ದೇವಸಾಕ್ಷಿಯಲೆಂದೆಂದಿಗುಂ, ಗುರುಹಿರಿಯರಾ
ಮಿತ್ರ ಸಾಕ್ಷಿಯಲೆಂದೆಂದಿಗುಂ "

ಓರೆ ನೋಟದಲೆ ನೋಡಿ ನುಡಿದಳು ಲೀಲ
" ಅದೆಲ್ಲ ಸರಿ .. ಆದರೂ ಜೋಕೆ....

ರೇಷನ್ ದಿನಸಿಗಳ ತರೆಮಾತ್ರ ಮರೆಯದಿರಿ,
ಒಂದಲ್ಲ ನಾವ್-ಇಬ್ಬರೆಂದು "

—ಡಿ. ವೆಂಕಟೇಶಮೂರ್ತಿ.

# ರಾಜರಸ್ತೆ

---o---

ರಾಜರಸ್ತೆ ಪಕ್ಕದಲ್ಲಿದ್ದ ತಾವರೆಕೆರೆ ಗ್ರಾಮದ ಮುಂದಿನ ದೊಡ್ಡ ಬೇವಿನಮರ ಬಲವಾದ ಬಿರುಗಾಳಿಗೆ ಉರುಳಿ ರಸ್ತೆಗೆ ಅಡ್ಡಲಾಗಿ ಬಿತ್ತು........... .. ....

ಗ್ರಾಮದ ಪಟೇಲರು, ರಸ್ತೆಗೆ ಅಡ್ಡಲಾಗಿ ಮರ ಉರುಳಿ ಬಿಟ್ಟಿದೆಯೆಂದೂ ಕೂಡಲೇ ಅದನ್ನು ತೆಗೆಸಿ ಜನ ಜಾನುವಾರುಗಳ ಓಡಾಟಕ್ಕೆ ಅನುಕೂಲ ಮಾಡ ಬೇಕೆಂದೂ ಷೇಕ್‌ದಾರರಿಗೆ ರಿಪೋರ್ಟ್ ಅದೇ ದಿನ ಬರೆದರು...............

ನಾಲ್ಕು ದಿನಗಳ ಮೇಲೆ ಷೇಕದಾರರು ಪಟೇಲರ ರಿಪೋರ್ಟನ್ನು ಅಮಲ್ದಾರ ರಿಗೆ ಎತ್ತಿಹಾಕುತ್ತಾ, ಅದರ ಕೆಳಗಡೆ "ಮರವನ್ನು ಹರಾಜು ಮಾಡಿಸಿ ಹರಾಜು ದಾರರು ಕೂಡಲೆ ಮರವನ್ನು ಕಡಿದು ದಾರಿ ಅಡ್ಡಬಿಡಿಸಬೇಕೆಂದೂ ಹುಕುಂ ಆಗ ತಕ್ಕದ್ದು" ಎಂದು ಷರಾಯಿಸಿದರು .. ...............

ಹದಿನೈದು ದಿವಸಗಳಲ್ಲೇ ಅಮಲ್ದಾರರ ಕಛೇರಿಯಲ್ಲಿ ಹೆಡ್‌ಗುಮಾಸ್ತರು ಈ ರೀತಿ ಷರಾ ಬರೆದರು: "ಮರದ ಉದ್ದ, ಸುತ್ತು, ವಗೈರೆ ಅಳತೆ ಕೊಟ್ಟಿಲ್ಲ. ಮರದ ಬೆಲೆ ತಿಳಿಸಿಲ್ಲ. ಬೆಲೆ ತಿಳಿಸಿದಲ್ಲಿ ಹರಾಜು ಷೇಕ್‌ದಾರರೇ ಮಾಡಬೇಕೋ, ಅಮಲ್ದಾರರೇ ಮಾಡಬೇಕೋ ತಿಳಿಸಲಾಗುತ್ತೆ. ಮರದ ಉದ್ದ, ಅಳತೆ, ವಗೈರೆಗಳ ಮೇಲೆ ಬೆಲೆ ನಿಶ್ಚಯಿಸತಕ್ಕದ್ದು. ತಪ್ಸೀಲುಗಳನ್ನು ಕೂಡಲೇ ಕಳುಹಿಸುವುದಕ್ಕಾಗಿ ರಿಪೋರ್ಟ್ ವಾಪಸ್ ಹಾಕಿದೆ". ಆಮೇಲೆ ಮೂರುದಿವಸದಲ್ಲೇ ಅಮಲ್ದಾರರು ಅದಕ್ಕೆ ಸಹಿ ಹಾಕಿದರು. ಐದು ದಿವಸಗಳಲ್ಲೇ ರಿಪೋರ್ಟ್ ಷೇಕ್‌ದಾರರಿಗೆ ಹಿಂದಿರುಗಿ ಬಂತು ........ ..

ನಾಲ್ಕು ದಿವಸಗಳಲ್ಲಿ ರಿಪೋರ್ಟಿನ ಜತೆಗೆ ಷೇಕ್‌ದಾರರು ಈ ರೀತಿ ಕಾಗದ ಬರೆದು ಅಮಲ್ದಾರರಿಗೆ ಎತ್ತಿಹಾಕಿದರು' "ಮರದ ಸುತ್ತು, ಉದ್ದ, ವಗೈರೆ ಅಳತೆ ಮಾಡಲು ನನ್ನಲ್ಲಿ ಟೇಪು ಇಲ್ಲ. ಹಿಂದಿನ ಷೇಕ್‌ದಾರರು ನನಗೆ ಕೆಲಸ ವಹಿಸಿ ಕೊಡುವಾಗ ಟೇಪು ಕೊಟ್ಟಿಲ್ಲ. ಟೇಪು ಕಳುಹಿಸಿದಲ್ಲಿ ವಿವರಣೆ ಕಳುಹಿಸಲಾಗುತ್ತೆ"

.........................

ಹದಿನೈದು ದಿನಗಳಲ್ಲಿ ಅಮಲ್ದಾರರ ಕಛೇರಿಯಲ್ಲಿ ಹೆಡ್‌ಗುಮಾಸ್ತರು ಈ ರೀತಿ ಷರಾ ಬರೆದರು ; "ಹಿಂದಿನ ಷೇಕ್‌ದಾರರು ಈಗಿನ ಷೇಕ್‌ದಾರನಿಗೆ ಟೇಪನ್ನು ಏಕೆ ಕೊಡಲಿಲ್ಲ. ಟೇಪು ಎಲ್ಲಿಟ್ಟಿದ್ದಾನೆ. ಕೂಡಲೆ ಆತ ಈತನಿಗೆ ಟೇಪು ವಹಿಸಿ ಕೊಡತಕ್ಕದ್ದು. ಇದುವರೆವಿಗೂ ವಿಳಂಬಮಾಡಿದ್ದಕ್ಕೆ ಸಮಜಾಯಿಸಿ ಕೊಡಬೇಕು".

ಮೂರು ದಿನಗಳಲ್ಲೇ ಅದಕ್ಕೆ ಅಮಲ್ದಾರರು ರುಜು ಹಾಕಿದರು. ಐದು ದಿನಗಳಲ್ಲೇ ಹುಕುಂ ಹಳೇ ಷೇಕದಾರನಿರುವ ಊರಿಗೆ ಹೋಯಿತು.... ...............

ಹಳೇ ಷೇಕದಾರ ನಾಲ್ಕು ದಿನಗಳಮೇಲೆ ಈ ರೀತಿ ಅಮಲ್ದಾರರಿಗೆ ಸಮಜಾಯಿಷಿ ಬರೆದ ; " ನನ್ನ ಹಿಂದಿನ ಷೇಕದಾರನು ನನಗೆ ಯಾವ ಟೇಪನ್ನೂ ವಹಿಸಿ ಕೊಟ್ಟಿರಲಿಲ್ಲ. ನನಗೆ ಯಾವ ಟೇಪನ್ನೂ ದಯಪಾಲಿಸಿರಲಿಲ್ಲ. ಆದ್ದರಿಂದ ನಾನು ಯಾವ ಟೇಪನ್ನೂ ವಹಿಸಿಕೊಡಲಿಲ್ಲ. ಅಲ್ಲದೆ ಷೇಕದಾರರಿಗೆ ಟೇಪುಗಳನ್ನು ಸರಬರಾಜು ಮಾಡುತ್ತಿಲ್ಲವೆಂದು ತಿಳಿಯಬರುತ್ತೆ ಜಾಹೀರ್ ''...................

ಹದಿನೈದು ದಿವಸಗಳಲ್ಲೇ ಅಮಲ್ದಾರರ ಕಛೇರಿಯಲ್ಲಿ ಹೆಡ್‌ಗುಮಾಸ್ತರು ಈರೀತಿ ಕಾಗದ ಬರೆದರು " ಸಬ್‌ಡಿವಿಜನ್ ಆಫೀಸರಿಗೆ—ಟೇಪುಗಳನ್ನು ಷೇಕ್‌ದಾರರಿಗೆ ಕೊಡುತ್ತಿಲ್ಲವಾಗಿ ತಿಳಿಯಬರುತ್ತೆ. ಇದರಿಂದ ಸರಕಾರಿ ಕೆಲಸಕ್ಕೆ ಧಕ್ಕೆ ಬರುತ್ತದೆ, ಈಬಗ್ಗೆ ಕೂಡಲೆ ಏರ್ಪಾಟು ಮಾಡಬೇಕು. ಮರ ಬಿದ್ದ ರಿಕಾರ್ಡು ಗಳನ್ನು ಅವಗಾಹನೆಗೆ ಕಳುಹಿಸಿರುತ್ತೆ '' ಆಮೇಲೆ ಮೂರು ದಿನಗಳಲ್ಲೇ ಅಮಲ್ದಾರರು ಅದಕ್ಕೆ ಸಹಿ ಹಾಕಿದರು. ಐದು ದಿವಸಗಳಲ್ಲಿ ಕಟ್ಟು ಸಬ್‌ಡಿವಿಜನ್ ಆಫೀಸಿಗೆ ರವಾನಿಸಲಾಯ್ತು ........... ....

ಒಂದು ತಿಂಗಳಲ್ಲೇ ಸಬ್‌ಡಿವಿಜನ್ ಆಫೀಸರ ಹೆಡ್‌ಗುಮಾಸ್ತೆ ಈ ರೀತಿ ಕಾಗದ ಬರೆದರು " ಡೆಪ್ಯುಟಿ ಕಮಿಷನರಿಗೆ— ಟೇಪುಗಳನ್ನು ಕೊಡಿಸಲು ನಮಗೆ ಅಧಿಕಾರವಿಲ್ಲ ಡೆಪ್ಯುಟಿ ಕಮಿಷನರ್‌ರವರು ಹುಕುಂ ಹೊರಡಿಸಬೇಕು. ಹುಕುಂ ಹೊರಡಿಸಿದ ಕೂಡಲೇ ಇಲ್ಲಿಂದ ಎಲ್ಲರಿಗೂ ತಿಳಿಸಲಾಗುತ್ತೆ. ಮರಬಿದ್ದ ರಿಕಾರ್ಡು ಗಳನ್ನು ಅವಗಾಹನೆಗೆ ಕಳುಹಿಸಿರುತ್ತೆ". ಆರು ದಿನಗಳಲ್ಲೇ ಸಬ್‌ಡಿವಿಜನ್ ಆಫೀಸರು ಇದಕ್ಕೆ ರುಜುಮಾಡಿದರು. ಹತ್ತು ದಿನಗಳಲ್ಲೇ ಡೆಪ್ಯುಟಿಕಮಿಷನರ ಆಫೀಸಿಗೆ ಕಟ್ಟನ್ನು ಕಳುಹಿಸಿದರು...................

ಮೂರು ತಿಂಗಳಲ್ಲೇ ಡೆಪ್ಯುಟಿ ಕಮಿಷನರ ಹೆಡ್‌ಗುಮಾಸ್ತೆ ಈ ರೀತಿ ಕಾಗದ ಬರೆದರು " ಸರ್ಕಾರಕ್ಕೆ—ಟೇಪುಗಳನ್ನು ಸರಬರಾಜು ಮಾಡಲಿಕ್ಕೆ ಹಣ ಮಂಜೂರಾಗತಕ್ಕದ್ದು. ಇದಕ್ಕೆ ಮಂಜೂರಾತಿ ಆಗಿರುವುದಿಲ್ಲ. ಟೇಪುಗಳನ್ನು ಷೇಕದಾರರಿಗೆಲ್ಲಾ ಅತ್ಯಾವಶ್ಯಕವಾಗಿ ಕೊಡಬೇಕಾಗಿರುತ್ತೆ. ಮರಬಿದ್ದ ರಿಕಾರ್ಡುಗಳನ್ನು ಅವಗಾಹನೆಗೆ ಕಳುಹಿಸಿರುತ್ತೆ". ಹದಿನೆಂಟು ದಿನಗಳಲ್ಲೇ ಡೆಪ್ಯುಟಿಕಮಿಷನರು ಇದಕ್ಕೆ ರುಜುಮಾಡಿದರು. ಒಂದು ತಿಂಗಳಲ್ಲೇ ಸರ್ಕಾರಕ್ಕೆ ಕಟ್ಟನ್ನು ಕಳುಹಿಸಿದರು ............... .......

ಆರು ತಿಂಗಳಲ್ಲೇ ಸರ್ಕಾರದ ಸೆಕ್ರೆಟರಿಗಳ ಹೆಡ್‌ಗುಮಾಸ್ತೆ ಈರೀತಿ ಷರಾ ಬರೆದರು : "ಟೇಪುಗಳನ್ನು ಸರಬರಾಜು ಮಾಡಲು ಈ ವರ್ಷ ಹಣ ಮಂಜೂರಾಗಿಲ್ಲ.

ಮುಂದಿನ ವರ್ಷ ಹಣ ಮಂಜೂರಾತಿ ಆಗುವುದರೊಳಗೆ ಪುನಃ ಬರೆಯಬಹುದು. ಆಗ ಆಲೋಚಿಸಲಾಗುತ್ತೆ. ಮರಬಿದ್ದ ರಿಕಾರ್ಡುಗಳನ್ನು ಕಳುಹಿಸಿದೆ'' ಒಂದು ತಿಂಗಳು ಆರು ದಿವಸಗಳಲ್ಲಿ ಸರ್ಕಾರದ ಸೆಕ್ರೆಟರಿಗಳು ಇದಕ್ಕೆ ರುಜುಮಾಡಿದರು. ಎರಡು ತಿಂಗಳಲ್ಲಿ ಕಟ್ಟನ್ನು ಹಿಂದಕ್ಕೆ ಕಳುಹಿಸಿದರು.... ............ ...

ಮುಂದೊಂದು ವರ್ಷದಲ್ಲಿ ಮರಬಿದ್ದ ಕಟ್ಟು ಡೆಪ್ಯುಟಿ ಕಮಿಷನರ ಆಫೀಸಿನಿಂದ, ಸಬ್‌ಡಿವಿಷನ್ನರ ಆಫೀಸಿಗೆ, ಅಲ್ಲಿಂದ ಅಮಲ್ದಾರರ ಕಛೇರಿಗೆ ಬಂದು, ಪುನಃ ಕ್ರಮವಾಗಿ ಯಾತ್ರೆ ಹೊರಟು ಒಂದು ವರ್ಷದ ಅಂತ್ಯದಲ್ಲಿ ಸರ್ಕಾರವನ್ನು ಮುಟ್ಟಿತು. ಸರ್ಕಾರದವರು ಟೇಪುಗಳನ್ನು ಸರಬರಾಜು ಮಾಡಲು ಹಣ ಮಂಜೂರು ಮಾಡಿದರು. ಅದಾದ ಆರು ತಿಂಗಳಲ್ಲೆ ಕಟ್ಟುಗಳು ಡೆ|| ಕ|| ಕಛೇರಿಗೆ ಬಂದವು. ಟೇಪುಗಳನ್ನು ಸರಬರಾಜು ಮಾಡತಕ್ಕದ್ದೆಂದು ಡೆ|| ಕ|| ರವರು ಮೂರು ತಿಂಗಳಲ್ಲೆ ಹುಕುಂ ಹೊರಡಿಸಿದರು. ಹದಿನೆಂಟು ದಿವಸಗಳಲ್ಲೆ ಹುಕುಂ ಸಬ್‌ಡಿವಿಜನ್ ಆಫೀಸಿಗೆ ಬಂತು. ಒಂದು ತಿಂಗಳಲ್ಲೆ ಸಬ್‌ಡಿವಿಜನ್ ಆಫೀಸರು ಅಮಲ್ದಾರರಿಗೆ ತಿಳುವಳಿಕೆ ಪತ್ರ ಹೊರಡಿಸಿದರು. ಹತ್ತು ದಿನಗಳಲ್ಲೇ ಕಟ್ಟುಗಳು ಅಮಲ್ದಾರರ ಕಛೇರಿಗೆ ಬಂದವು. ಹದಿನೈದು ದಿನಗಳಲ್ಲೇ ಅಮಲ್ದಾರರು ಟೇಪುಗಳನ್ನು ಷೇಕುದಾರರಿಗೆ ಸರಬರಾಜುಮಾಡಿದರು........ ...............

ನಂತರ ಹದಿನೈದು ದಿವಸದಲ್ಲೇ ಮರಬಿದ್ದ ಕಟ್ಟುಗಳನ್ನು ಷೇಕದಾರರಿಗೆ ಕಳುಹಿಸಿ "ಅಳತೆಮಾಡಿ ಕಳುಹಿಸತಕ್ಕದ್ದು—ಜರೂರು" ಎಂದು ಷರಾ ಬರೆದು ಕಳುಹಿಸಿದರು........ . ..........

ನಾಲ್ಕು ದಿನಗಳ ಮೇಲೆ ಷೇಕದಾರರು ಗ್ರಾಮಕ್ಕೆ ಹೋಗಿ ಬಂದು "ಮರ ಇಲ್ಲ. ಕಳವು ಆಗಿರುತ್ತೆ. ತಾವರೆಕೆರೆ ಗ್ರಾಮದ ಮರುಳ, ಮಂಕ, ಮಡ್ಡಿ, ಇವರುಗಳು ಮರವನ್ನು ಗೈರ್ ಹುಕುಂನಿಂದ ಕಡಿದು ಕಳವು ಮಾಡಿರುವುದಾಗಿ ತಿಳಿಯಬಂದಿದ್ದರಿಂದ ಅವರುಗಳ ಮೇಲೆ ಪೋಲೀಸಿನಲ್ಲಿ ಫಿರ್ಯಾದುಮಾಡಿರುತ್ತೇನೆ. ಕ್ರಮ ನಡೆಯುತ್ತಿದೆ ಜಾಹೀರ'' ಎಂದು ಫೈಸಲಾತಿ ರಿಪೋರ್ಟು ಮಾಡಿದರು.... ...............

ಹದಿನೈದು ದಿವಸಗಳಲ್ಲೇ ಅಮಲ್ದಾರರು ಮರ ಬಿದ್ದ ಪ್ರಸಂಗದ ಕಟ್ಟುಗಳ ಮೇಲೆ "ಮುಕ್ತಾಯವಾಗಿರುತ್ತೆ" ಎಂದು ಭುಕ್ತಾಯಗೊಳಿಸಿದರು.

—ರಾಮು.

# ಚಂದೀ - ಆಹಾರ ಪತ್ತೇದಾರ

ಛಿದ್ರಪಟ್ಟಣದ ಬಸ್ ಸ್ಟ್ಯಾಂಡಿನಲ್ಲಿ ಚಂದೀ ಐದಾರು "ಪತ್ತೇದಾರ್ ಕಾದಂಬರಿ" ಗಳನ್ನು ಕೊಂಡ. ನೀವೂ ಕೆಲವನ್ನು ಓದಿರಬಹುದು. ಎಲ್ಲವೂ ಆ ಕಥೆಗಾರನು ತನ್ನ ಪ್ರಿಯಪಾಠಕನಿಗೂ, ವಾಚಕ ಮಹಾಶಯನಿಗೂ ಹೇಳುವ ಬಂಗಾಳಿ ಪತ್ತೇದಾರನ ಸಾಹಸ ಕಥೆಗಳು ನೀವು ಆ ಬಂಗಾಳಿ ಪತ್ತೇದಾರನನ್ನು ಕರಗದ ರಾತ್ರಿ ದೊಡ್ಡಪೇಟೆ ಚೌಕದಲ್ಲಿದ್ದರೂ ಪತ್ತೆ ಮಾಡಬಲ್ಲಿರಿ. ಎಲ್ಲರಿಗಿಂತ ಎತ್ತರವಾದ ಆಳು, ಆಜಾನುಬಾಹು, ಸ್ಫುರದ್ರೂಪಿ, ವಿದ್ಯಾವಂತ, ಗುಂಗುರುಕೂದಲು, ಸದಾ ಹಸನಗು, ನಕ್ಕರೆ ಬಲಗೆನ್ನೆಯಲ್ಲಿ ತುಸ ಹಳ್ಳ ಬೀಳುವುದು, ಅಂಥಾ ಆಳು ಸಿನಿಮಾಗಳಲ್ಲಿ ನಿಮ್ಮ ಮುಂದೆ ಕೂರುವುದುಂಟು—ತಲೆಯಮೇಲೆ ಒಂದು ನವಾಬ್ ಟೋಪಿ ಧರಿಸಿ, ಈಗಲೂ ನಿಮಗೆ ಕತ್ತು ಳುಕಿರುವುದು ಅವನಿಂದಲೇ— ಅಂತೂ ಆ ಪತ್ತೇದಾರರೆಲ್ಲಾ ಬಂಗಾಳಿಗಳೇ— ಎಷ್ಟೇ ಅಗಲಿ ನೇತಾಜಿ ಹುಟ್ಟಿದ ಜಾತಿ ಅಲ್ಲವೇ? ಅವನಂತಹ ಶೂರನಿಲ್ಲ. ಅಮಾವಾಸ್ಯೆ ರಾತ್ರಿ, ಬ್ಲ್ಯಾಕ್ಔಟ್, ಸೋನೆಮಳೆ, ಊರಾಚೆ ಸ್ಮಶಾನದ ಪಕ್ಕದಲ್ಲಿ ಕಾಡು, ಎಲ್ಲೋ ಒಬ್ಬ ನಾರಿಯ ಆರ್ತಧ್ವನಿ ಕೇಳಿಬರುವುದು. ಮೇಲೆ ವರ್ಣಿಸಿದ ನಮ್ಮ ಶೂರನು ಎಲ್ಲಿಂದಲೋ ರಂಗಭೂಮಿಯ ಮೇಲೆ ಅವತರಿಸಿ ಆ ಕಗ್ಗತ್ತಲೆಯಲ್ಲಿ ನುಗ್ಗಿ ಇಪ್ಪತ್ತೇಳು ಜನ ಕರೀ ಬಟ್ಟೆಯನ್ನು ಧರಿಸಿದ ಕಾಳರಾಕ್ಷಸರನ್ನು ಅಟ್ಟಿಸಿಕೊಂಡು ಹೋಗಿ, ಮುಷ್ಟಿಯುದ್ಧಮಾಡಿ ಅಷ್ಟು ಜನರನ್ನು ಚಲ್ಲಾಪಿಲ್ಲಿ ಮಾಡಿ ಆ ಹೆದರಿದ ಸ್ತ್ರೀರತ್ನದ ಮುಂದೆ ತಲೆಬಾಗಿ ನಿಲ್ಲುವನು.

ಚಂದೀಗೆ ಈ ಪತ್ತೇದಾರ್ ಕಾದಂಬರಿಗಳು ಅಂದರೆ ಬಹಳ ಇಷ್ಟ; ಅವುಗಳಿಂದ ಅವನ ವಿದ್ಯೆಯೆಲ್ಲಾ ಹಾಳಾಯಿತು. ಬುದ್ಧಿಯೆಲ್ಲಾ ಮಾಯವಾಯಿತು—ಅವನಿಗಿದ್ದ ಸ್ವಲ್ಪಕೂಡ. ಅವನೇನು ಪತ್ತೇದಾರನಾಗಲಿಲ್ಲ. ಚಂದೀ ಈಗಲೂ ಇಡೀ ಹುಚ್ಚಾಸ್ಪತ್ರೆಯಲ್ಲಿ ಒಬ್ಬ ಹುಚ್ಚನನ್ನು ಪತ್ತೆ ಹಚ್ಚಲಾರ. ನಮ್ಮ ಜೈಲಿನಲ್ಲಿ ಕಳ್ಳರನ್ನೂ ಪೋಲೀಸಿನವರನ್ನೂ ಗುರ್ತಿಸಲಾರ. ಒಂದು ಹೆಜ್ಜೆ ಗುರುತು ಬರಿಕಾಲಿನದೇ ಅಥವಾ ಪಾದರಕ್ಷೆ ಧರಿಸಿದ ಕಾಲಿನದೇ ಹೇಳಲಾರ, ಆದರೂ ಅವನಿಗೆ ಜಂಭ.

ನಾವು ಛಿದ್ರಪಟ್ಟಣಕ್ಕೆ ಸೇರಿದ ದಿನ, ಅಲ್ಲಿನ ಶ್ಯಾನುಭೋಗರಿಗೆ ಒಂದು ಹುಕುಂ ಬಂದಿತ್ತು. ಅಲ್ಲಿ ಆಹಾರಪದಾರ್ಥಗಳನ್ನು ಶೇಖರಣೆ ಮಾಡಿರುವವರನ್ನು ಪತ್ತೆಹಚ್ಚುವುದಕ್ಕಾಗಿ ಸರ್ಕಾರದ ಅಧಿಕಾರಿಗಳು ಬರುವುದಾಗಿಯೂ, ಅವರಿಗೆ ಆದಷ್ಟು ಅನುಕೂಲ ಒದಗಿಸಬೇಕಾಗಿಯೂ ಆಜ್ಞೆ ಬಂದಿತ್ತು. ನಾನು, ಚಂದೀ,

ರಾಜ ಮೂವರೂ ನಮ್ಮ ನಮ್ಮ ದೊಡ್ಡ ಶಹರಿನ ನಾಗರಿಕತೆಯನ್ನ ನಮ್ಮ ಮೂತಿ ಗಳಲ್ಲಿ ತೋರಿಸುತ್ತಾ ಛಿದ್ರಪಟ್ಟಣದ ಟೋಲ್‌ಗೇಟೊಳಗೆ ನುಗ್ಗಿದ ತಕ್ಷಣ ಎಲ್ಲರೂ ನಮ್ಮನ್ನೇ ಅಧಿಕಾರಿಗಳು ಅಂತ ತಿಳಿದುಕೊಂಡರು. ಅವರ ವಿನಯ ಸ್ವಾಗತದ ಕಾರಣ ನನಗೆ ಮೊದಲು ತಿಳಿಯಲಿಲ್ಲ. ಎಂದಿನಂತೆ ಚಂದೀ ಮುಂದೆ ನುಗ್ಗಿದ. ಶ್ಯಾನುಭೋಗರು—ಇವರನ್ನು ಸರ್ಕಾರದ ಕೀಳು ಬ್ರಾಹ್ಮಣ ಹುದ್ದೇದಾರ ಅಂತ ಒಂದು ಮೈಲಿನಿಂದ ಹೇಳಬಹುದು—ಅತಿ ವಿನಯದಿಂದ ನಮ್ಮನ್ನು ಛಿದ್ರಪಟ್ಟಣದ ಸ್ಕೂಲಿಗೆ ಕರೆದುಕೊಂಡು ಹೋದರು. ತಮ್ಮ ಕಿಸೆಯಿಂದ ಒಂದು ಕಾಗದವನ್ನು ನಡುಗುವ ಹಸ್ತದಿಂದ ಚಾಚಿ ಚಂದಿಯ ಕೈಲಿ ಕೊಟ್ಟರು.

" ಸ್ವಾಮಿ, ಇದೇ ಈ ಊರಿನಲ್ಲಿ ಧಾನ್ಯ ಶೇಖರಿಸಿರುವವರ ಪಟ್ಟಿ. ನಿನ್ನೆ ನಾನೂ, ಒಬ್ಬ ಕಾನ್ಸ್ಟೇಬಿಲ್ಲೂ ಊರೆಲ್ಲ ಸುತ್ತಿ ಇಷ್ಟನ್ನೂ ಪತ್ತೆಹಚ್ಚಿದೆವು " ಅಂದ.

ನಾನು ನಿಜವಾದ ಸಂಗತಿ ತಿಳಿಸಿ ಈ ತಂಟೆಯಿಂದ ತಪ್ಪಿಸಿಕೊಳ್ಳೋಣ ಅನ್ನು ವಷ್ಟರಲ್ಲಿ ಚಂದೀ ಸನ್ನೆಮಾಡಿ ನನ್ನ ಬಾಯಿ ಮುಚ್ಚಿದ. ನಾನೂ ರಾಜಾ ಕಣ್ಣು ಸನ್ನೆಯಿಂದಲೇ ಚಂದೀ ಏನೋ ಟೈಮ್ ಬಾಂಬ್ ಇಟ್ಟ ಅಂದುಕೊಂಡೆವು. ಚಂದೀ ಆ ಪಟ್ಟಿಯನ್ನು ಪೂರ್ತಿಯಾಗಿ ತಿರುವಿ ಹಾಕಿ :

" ಸರಿ ಇವೆಲ್ಲಾ ಸಾಧಾರಣ ಎಲ್ಲಿನಂತೆಯೇ ಇದೆ. ಇಲ್ಲಿ ಡಾಕ್ಟರ್ ಯಾರು ? " ಅಂದ.

ನನಗೆ ಇದರ ಅರ್ಥ ತಿಳಿಯಲಿಲ್ಲ. ಆದರೂ ತಮ್ಮ ಹೊಟ್ಟೆಯನ್ನು ನಂಬಿ, ಅವರೇಕಾಳು ಕೊಟು ತಿಂದು ಸಂಗೀತ ಕಚೇರಿಗೆ ನುಗ್ಗುವ ಪಾಪಿಗಳ ಹಾಗೆ ಚಂದೀ ಪತ್ತೇದಾರಿಯಲ್ಲಿ ಭರವಸೆ ಇಟ್ಟು ಸುಮ್ಮನೆ ಇದ್ದುಬಿಟ್ಟೆ. ಆ ಊರಲ್ಲಿ ಒಬ್ಬ ಸರ್ಕಾರಿ ಡಾಕ್ಟ್ರು, ಒಬ್ಬ ಪಾಪು ಡಾಕ್ಟ್ರು. ಶ್ಯಾನುಭೋಗರಿಗೆ ನಮಗೆಲ್ಲಾ ಹೊಟ್ಟೆಗವಿಣಿ ಸೋಕೆ ಏರ್ಪಾಡುಮಾಡಬೇಕೆಂದೇ ಹುಕುಂ ಕೊಟ್ಟು ಚಂದೀ ತಮ್ಮನ್ನು ಪಾಪು ಡಾಕ್ಟ್ರ ಸನ್ನಿಧಿಗೆ ಹೊರಟ.

" ನೋಡ್ರೋ, ಎಲ್ರೂ ತಿಳ್ಕೊಂಡಿರೋದು ಯಾರು ಚೆನ್ನಾಗಿ ತಿಂದು ದುಂಡಗಿ ರ್‍ತಾರೆ ಅವರ ಮನೇಲಿ ಧಾನ್ಯ ಶೇಖರಿಸಿರ್‍ತಾರೇಂತ. ಅದು ಶುದ್ಧ ತಪ್ಪು. ಈಗಿನ ಅಕ್ಕಿ, ಗೋಧಿ, ಬೇಳೆ ತಿಂದರೆ ಬರೋದು ವೈಯಲ್ಲ -ಅಜೀರ್ಣ. ಅದನ್ನ ಈ ಊರಲ್ಲಿರೋ ಡಾಕ್ಟ್ರನ್ನ ವಿಚಾರಿಸಿದ್ರೆ ಗೊತ್ತಾಗುತ್ತೆ. ಇದೆಲ್ಲಾ Art of detectionನ್ನೋ " ಅಂದ.

ರಾಜನಿಗೆ ಮೊನ್ನೆ ಊರಿಂದ ಹೆಣ್ಣು ಕೂಸು ಹುಟ್ಟಿತು ಅಂತ ಕಾಗದ ಬಂದಾಗಿ ನಿಂದ ಅವನಿಗೆ ಏನೂ ಬೇಡವಾಗಿದೆ. ಜಗಳವಾಡುವುದಕ್ಕೆ ದಮ್ಮೇ ಇಲ್ಲ. ನನಗೋ —ಅವಳಿ ಮಕ್ಕಳು ನಮ್ಮ ಮನೆತನದ ಮಾಮೂಲಾದ್ದರಿಂದ ಇನ್ನೊಂದು ವಾರ ದಲ್ಲೇ ಏನು ಸಮಯವೋ ಮನೆಯಲ್ಲಿ ಅನ್ನುವ ಸುಸ್ತು. ಇನ್ನು ಚಂದೀಗೆ ಅಡ್ಡಿ

ಯಾರು ? ಷಾಪಿನ ಡಾಕ್ಟ್ರು ನಮ್ಮನ್ನು ಆದರದಿಂದ ಬರಮಾಡಿದರು. ಅವರ ಮನಸ್ಸಿನಲ್ಲಿ ಮೂವರು ಖಾಯಂ ಗಿರಾಕಿಗಳು ಸಿಕ್ಕಿದರು ಅನ್ನುವ ಸಂತೋಷವಿರಬೇಕ.

"ಬನ್ನಿ, ಕೂಡ್ರಿ, ಯಾವೂರು, ಯಾವಾಗ ಬಂದಿರಿ ನಮ್ಮೂರಿಗೆ?" ಅಂದರು. ಚಂದೀ ನನ್ನ ಮುಖವನ್ನು ಅರೆಘಳಿಗೆ ನೋಡಿ—ಅಪ್ಪಂದಿರು ಮಕ್ಕಳಿಗೆ "ಅಮ್ಮಂಗೆ ಈ ಸಮಾಚಾರ ಹೇಳೀರಿ" ಅನ್ನುವ ನೋಟ!—

"ನಾವಿಲ್ಲೇ ಬಂದೆವು. ಹೇಗಿದೆ ಬಿಸಿನೆಸ್ಸು ?" ಅಂದ.

"ಅಯ್ಯೋ, ಬ್ರಾಹ್ಮಣ ಕೇರೀಲಿ ಬ್ರಾಹ್ಮಣ ವೈದ್ಯನಿಗೆ ಬಿಸಿನೆಸ್ಸೇನಾಗೋದು, ಬರೀ ಔಷ್ಧಿ ಖರ್ಚಷ್ಟೆ" ಅಂದ.

ಚಂದೀ ಪುನಹ ಅದೇ ನೋಟವನ್ನು ಬೀರಿ, "ನಾವಿಲ್ಲಿ ಬಂದಿರುವುದು ಧಾನ್ಯದ ಜಫ್ತಿಗೆ. ನಿಮ್ಮಲ್ಲಿ ಈ ನಡುವೆ ಅಜೀರ್ಣಕ್ಕೆ ಅಂತ ಯಾರ್‍ಯಾರು ಔಷಧಿ ತೆಗೆದುಕೊಂಡಿದ್ದಾರೆ?" ಅಂದ.

ನನಗೆ ರೆಕ್ಕೆಗಳಿದ್ದಿದ್ದರೆ ನಾನಲ್ಲಿಂದಲ್ಲೇ ಹಾರಿಬಿಡುತ್ತಿದ್ದೆ.

ಡಾಕ್ಟ್ರು ಆಶ್ಚರ್ಯ ತೋರಿ "ಏನು ಆಹಾರ ಇಲಾಖೆಯವರೇ ನೀವು? ಹಾಗಾದರೆ ಈ ಊರು ಪಟೇಲರ ಅಳಿಯಂದಿರೋ ನೀವು" ಅಂತ ಚಂದೀನ ಕೇಳಿದರು.

ಚಂದೀಗೆ ಈ ಪ್ರಶ್ನೆಯ ನಿರೀಕ್ಷಣೆ ಇರಲಿಲ್ಲ. ಆದರೂ ಅವನದು ಒಂದು ತರಹ ನಿಧಾನ ಸ್ವಭಾವ.

"ಅದೇನು, ನಿಮಗ್ಹ್ಯಾಗೆ ಗೊತ್ತು" ಅಂತ ತೊದಲಿದ.

"ಇಲ್ಲ, ಮೊನ್ನೆ ಪಟೇಲರು ಬಂದಿದ್ರು, ಅವರೇ ಹೇಳಿದರು—ಹೀಗೆ ಈ ಆಹಾರ ವಿಷಯವಾಗಿ ಅವರ ಅಳಿಯಂದಿರು ಈ ಊರಿಗೆ ಬರ್‍ತಾರೆ" ಅಂತ,

"ಓಹೋ, ಹಾಗಾದರೆ ಪಟೇಲ್ರ ಅಳಿಯಂದಿರು ಆಹಾರ ಇಲಾಖೆಯೋ?" ಅಂದೆ.

"ಹೌದು. ಅದಕ್ಕೇ ಪಟೇಲರು ಅವರನ್ನೇ ಈ ಊರಿಗೆ ಬಹಳ ಮೆಹನತ್ ಮಾಡಿ ಕರೆಸಿಕೊಳ್ತಾರೆ ಅಂತ ಇಲ್ಲಿನ ಅಭಿಪ್ರಾಯ" ಅಂದರು.

ನಾನು ರಾಜಾ ಚಂದೀಗೆ ಬುದ್ಧಿ ಹೇಳಿ ಛಿದ್ರಪಟ್ಟಣದಿಂದ ಮುಂದೆ ಕರೆದುಕೊಂಡು ಹೊರಟೆವು. ಶ್ಯಾನುಭೋಗರನ್ನು ಪುನಹ ನೋಡಬೇಕಾದ ಆತುರವೇ ನಿರಲಿಲ್ಲ. ಅದೂ ಅಲ್ಲದೆ ಚಂದೀ ಆ ಊರಲ್ಲಿ ಇಬ್ಬರು ಪತ್ತೇದಾರರು ಬೇಕಿಲ್ಲವೆಂದ.

"ಆದರೂ —ಲ್ರೋ ಆ ಡಾಕ್ಟ್ರ ಹತ್ತಿರ ಪಟೇಲ ಏಕೆ ಹೋಗಿದ್ದ ಅಂತ ಕೇಳಬಹುದಾಗಿತ್ತಲ್ರೋ" ಅಂದುಕೊಂಡ.

—ಕೇಫ.

---

**ಸರಿಯಾದ ಉತ್ತರಗಳು—** 1. (3) 2 (3) 3 (3) 4 (4) 5 (5) 6 (1) 7 (4).